ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 228 RNI Number : KNKAN/25/A2770 29-08-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :228 ರಾಯಚೂರು 29-08-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶುದ್ಧೀಕರಣ ಘಟಕ ಕೆಟ್ಟು ಸಿಬ್ಬಂದಿ ಪರದಾಟ

ರಾಯಚೂರು,ಆ.28-

ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಸ್ಥಾಪಿಸಿರುವ ಆರ್‌ಒ ನೀರು ಶುದ್ಧೀಕರಣ ಘಟಕಗಳ ನಿರ್ವಹಣೆ ಸಮರ್ಪಕವಾಗಿ ನಿರ್ವಹಣೆಯಿಲ್ಲದೇ ಕೆಟ್ಟು ಹೋಗಿದ್ದು ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ರಾಯಚೂರು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿಯಲ್ಲಿರುವ ಆರ್‌ಒ ಫಿಲ್ಟರ್ ಘಟಕ ಸಂಪೂರ್ಣವಾಗಿ ಕೆಟ್ಟುಹೋಗಿದ್ದು ಪೈಪ್‌ಗಳು ಕಿತ್ತು ಹೋಗಿವೆ, ಪಕ್ಕದಲ್ಲೇ ಮತ್ತೊಂದು ನೀರು ಶುದ್ಧೀಕರಣ ಘಟಕವಿದ್ದರೂ, ಅದಕ್ಕೂ ನೀರಿನ ಪೈಪ್‌ಗಳ ಸಂಪರ್ಕ ಕಲ್ಪಿಸದಿರುವುದು ಕಂಡುಬಂದಿದೆ.

ಸರ್ಕಾರದಿಂದ ದುಬಾರಿ ಮೊತ್ತದಲ್ಲಿ ಆರ್‌ಒ ಘಟಕಗಳನ್ನು ಅಳವಡಿಸಿ, ಅವುಗಳ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳದೆ ಕೇವಲ ಕಚೇರಿಗಳಲ್ಲಿ ಪ್ರದರ್ಶನಕ್ಕಿಟ್ಟಂತಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ನೀರು ಶುದ್ಧೀಕರಣ ಘಟಕಗಳು ಬಳಕೆಗೆ ಬಾರದ ಹಿನ್ನೆಲೆಯಲ್ಲಿ ಕಚೇರಿಗೆ ಪ್ರತಿದಿನ ಎರಡು-ಮೂರು ನೀರಿನ ಕ್ಯಾನ್‌ಗಳನ್ನು ಖಾಸಗಿ ಅಂಗಡಿಯಿಂದ ತರಿಸಿಕೊಳ್ಳಲಾಗುತ್ತಿದೆ.

ಇದು ಕೇವಲ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿಗೆ ಸೀಮಿತವಾದ ಸಮಸ್ಯೆಯಲ್ಲ. ಜಿಲ್ಲೆಯ ವಿವಿಧ ಸರ್ಕಾರಿ ಇಲಾಖೆಗಳ ಕಚೇರಿಗಳಲ್ಲಿಯೂ ಇದೇ ರೀತಿಯ ಆರ್‌ಒ ಘಟಕಗಳು ನಿರ್ವಹಣೆಯ ಕೊರತೆಯಿಂದ ಬಳಕೆಯಾಗದೆ ಇರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿಬರುತ್ತಿವೆ.

ಸರ್ಕಾರದ ಹಣದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಅಳವಡಿಸುವ ಆರ್‌ಒ ಘಟಕಗಳ ನಿರ್ವಹಣೆಗೆ ಪ್ರತ್ಯೇಕ ವ್ಯವಸ್ಥೆ ಇದೆಯೇ? ಘಟಕಗಳು ಎಷ್ಟು ದಿನಗಳಿಂದ ಕೆಟ್ಟಿವೆ? ದುರಸ್ತಿಗೆ ಎಷ್ಟು ಹಣ ಖರ್ಚಾಗಿದೆ? ಪ್ರತಿದಿನ ಖಾಸಗಿ ನೀರಿನ ಕ್ಯಾನ್‌ಗಳಿಗೆ ಎಷ್ಟು ಹಣ ಪಾವತಿಸಲಾಗುತ್ತಿದೆ? ಎಂಬ ಪ್ರಶ್ನೆಗಳಿಗೆ ಅಧಿಕಾರಿಗಳೇ ಉತ್ತರಿಸಬೇಕಿದೆ.ಸರ್ಕಾರಿ ಕಚೇರಿಗಳಲ್ಲಿ



ಅಳವಡಿಸಿರುವ ಎಲ್ಲಾ ಆರ್‌ಒ



3 ನೇ ಪುಟಕ್ಕೆ

ಎಸ್‌ಐಆರ್ ವಿರುದ್ಧ ಸೆ.1ರಂದು ಎಲೆಕ್ಷನ್ ಕಮಿಷನ್ ಚಲೋ


ಸಂತ್ರಸ್ತ ಮತದಾರರ ಸಾಕ್ಷ್ಯಗಳೊಂದಿಗೆ ಪ್ರತಿಭಟನೆ; ದೋಷಪೂರಿತ ಪ್ರಕ್ರಿಯೆ ಸ್ಥಗಿತಕ್ಕೆ ಆಗ್ರಹ

ರಾಯಚೂರು,ಆ.28-

ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ಪ್ರಕ್ರಿಯೆಯಿಂದ ಅರ್ಹ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಆರೋಪಿಸಿ ಕರ್ನಾಟಕ ನಾಗರಿಕ ಸಂಘಟನೆಗಳ ವತಿಯಿಂದ ಸೆ.1ರಂದು ಸಂತ್ರಸ್ತ ಮತದಾರರ ಸಾಕ್ಷ್ಯಗಳೊಂದಿಗೆ ಎಲೆಕ್ಷನ್ ಕಮಿಷನ್ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಮುಖಂಡ ಶರಣಗೌಡ ಕುಮಾರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಲಕ್ಷಾಂತರ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗುವ ಆತಂಕ ಎದುರಾಗಿದೆ. ಹಲವು ಮತದಾರರನ್ನು ಅನುಮಾನಾಸ್ಪದರೆಂದು ಪರಿಗಣಿಸಿ ನೋಟಿಸ್ ನೀಡಲಾಗಿದ್ದು, ತಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಲು ಜನರು ಅಧಿಕಾರಿಗಳ ಕಚೇರಿಗಳಿಗೆ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

2025ರ ಮತದಾರರ ಪಟ್ಟಿಯಲ್ಲಿದ್ದವರ ಪೈಕಿ ಎಎಸ್‌ಡಿಡಿಓ ಸೇರಿದಂತೆ ವಿವಿಧ ಕಾರಣಗಳನ್ನು ಉಲ್ಲೇಖಿಸಿ ದೊಡ್ಡ ಪ್ರಮಾಣದಲ್ಲಿ ಹೆಸರುಗಳನ್ನು ಕೈಬಿಡಲಾಗಿದೆ. ಕೆಲಸಕ್ಕಾಗಿ ಸ್ಥಳಾಂತರಗೊಂಡವರು, ಬಾಡಿಗೆ ಮನೆ ಬದಲಾಯಿಸಿದವರು ಹಾಗೂ ಎನ್ಯುಮರೇಷನ್ ಪ್ರಕ್ರಿಯೆಯಲ್ಲಿ ವಿವಿಧ ಕಾರಣಗಳಿಂದ ದಾಖಲಾಗದವರ ಹೆಸರುಗಳನ್ನು ಕೈಬಿಟ್ಟಿರುವುದು ಪ್ರಶ್ನಾರ್ಹವಾಗಿದೆ



3 ನೇ ಪುಟಕ್ಕೆ

ದಲಿತರ ಕೊಲೆ ನಡೆಯುತ್ತಿದೆ; ಗೃಹ ಸಚಿವರು ಆರ್‌ಎಸ್‌ಎಸ್ ಹೇಳಿಕೆಯಲ್ಲಿ ಬ್ಯೂಸಿ: ಛಲವಾದಿ ನಾರಾಯಣಸ್ವಾಮಿ

ರಾಯಚೂರು,ಆ.28-

ರಾಜ್ಯದಲ್ಲಿ ದಲಿತರ ಸರಣಿ ಕೊಲೆಗಳು ನಡೆಯುತ್ತಿದ್ದು, ಡ್ರಗ್ಸ್ ಹಾಗೂ ಗಾಂಜಾ ಜಾಲದಿಂದ ಯುವಕರು ನಲುಗುತ್ತಿದ್ದಾರೆ. ಅಪರಾಧ ಚಟುವಟಿಕೆಗಳು ಹೆಚ್ಚಾಗುತ್ತಿದ್ದರೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಕುರಿತು ಹೇಳಿಕೆ ನೀಡುವುದರಲ್ಲಿ ಬ್ಯೂಸಿಯಾಗಿದ್ದಾರೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ಟಿ. ನಾರಾಯಣಸ್ವಾಮಿ ವ್ಯಂಗ್ಯವಾಡಿದರು.

ಲಿಂಗಸುಗೂರು ತಾಲ್ಲೂಕಿನ ಕರಡಕಲ್ ಗ್ರಾಮದಲ್ಲಿ ರಾಣೆಮ್ಮ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಬಳಿಕ ಲಿಂಗಸುಗೂರು ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ''ಪ್ರಿಯಾಂಕ್ ಖರ್ಗೆಯವರನ್ನು ಆರ್‌ಎಸ್‌ಎಸ್ ಮಂತ್ರಿಯನ್ನಾಗಿ ಮಾಡಿ; ಗೃಹ ಸಚಿವರಾಗಲು ಅವರಲ್ಲಿ ಯೋಗ್ಯತೆ ಇಲ್ಲ'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಡ್ರಗ್ಸ್ ಮತ್ತು ಗಾಂಜಾ ಹಾವಳಿ ಹೆಚ್ಚಾಗಿದ್ದು, ಯುವಕರು ದುಶ್ಚಟಗಳಿಗೆ



ಬಲಿಯಾಗುತ್ತಿದ್ದಾರೆ. ಇದರಿಂದ ಕುಟುಂಬಗಳು ನಾಶವಾಗುತ್ತಿವೆ. ಇಂತಹ ಗಂಭೀರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಗೃಹ ಸಚಿವರು ವಿಫಲರಾಗಿದ್ದಾರೆ. ಹೀಗಾಗಿ ಮುಖ್ಯಮಂತ್ರಿಗಳು ಸಮರ್ಥ ವ್ಯಕ್ತಿಯನ್ನು

3 ನೇ ಪುಟಕ್ಕೆ

ಲೋಕ ಕಲ್ಯಾಣಕ್ಕಾಗಿ ಸೋಪಿ ಸಂತರು-ಶರಣರಿಂದ ಪಾದಯಾತ್ರೆ

ಸುರಪುರ,ಆ.28-

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ದೇವಪುರ ಗ್ರಾಮದಿಂದ ಲೋಕ ಕಲ್ಯಾಣಾರ್ಥವಾಗಿ ತಿಂಥಣಿ ಗ್ರಾಮದ ಶ್ರೀ ಜಗದ್ಗುರು ಮೌನೇಶ್ವರ ದೇವಸ್ಥಾನಕ್ಕೆ ನಾಲ್ಕನೇ ವರ್ಷದ ಸರ್ವ ಧರ್ಮೀಯರ ಪಾದಯಾತ್ರೆಯನ್ನು ಸರ್ವ. ಸೋಪಿ ಸಂತರು ಶರಣರು ಸಕಲ ಸದಭಕ್ತರು ಯಶಸ್ವಿಯಾಗಿ ಭಾಗವಹಿಸಿದರು ಎಂದು ರವಿ ಮುತ್ಯಾ ಕಲಕೇರಿ ತಿಳಿಸಿದ್ದಾರೆ.

ರವಿ ಸಾಹುಕಾರ ಮಾತನಾಡಿ ಸರ್ವಧರ್ಮ ಪಾದಯಾತ್ರೆ ರವಿ ಮುತ್ಯಾ ರವರ ನೇತೃತ್ವದಲ್ಲಿ ನಡೆಯುತ್ತಿದೆ ಎಂದರು. ಪ್ರತಿ ವರ್ಷದಂತೆ ಈ ವರ್ಷವೂ ಕೂಡ ರವಿ ಮುತ್ಯಾ ಮತ್ತು ನಾಗರಾಜ ಮುತ್ಯಾ ಅವರ ನೇತೃತ್ವದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಆಗಸ್ಟ್ 27ರಂದು ಗುರುವಾರ ಬೆಳಿಗ್ಗೆ



ದೇವಾಪುರ ಗ್ರಾಮದ ಶ್ರೀ ಗ್ರಾಮ ದೇವತೆ ದೇವಸ್ಥಾನದಿಂದ ಆರಂಭಗೊಳ್ಳುವ ಪಾದಯಾತ್ರೆ, ತಿಂಥಣಿಯ ಶ್ರೀ ಜಗದ್ಗುರು ಮೌನೇಶ್ವರ ದೇವಸ್ಥಾನದವರೆಗೂ ನಡೆದೆವು

ನಾಡಿನ ಸಮಸ್ತ ರೈತರಿಗೆ ಒಳ್ಳೆಯದಾಗಲಿ ಮಳೆ ಬೆಳೆ ಚೆನ್ನಾಗಿ ಬಂದು ರೈತರಿಗೆ ಸುಖ ಸಂತೋಷ ಲಭಿಸಲಿ ಎಂದು ಶ್ರೀ ಮೌನೇಶ್ವರರಲ್ಲಿ ಪ್ರಾರ್ಥಿಸಲಾಗುವುದು. ಗ್ರಾಮ ದೇವತೆ ಮಲ್ಲಣ್ಣ ಮುತ್ಯಾ ಅಂಬಣ್ಣ ಮುತ್ಯಾ ಅವರ

3 ನೇ ಪುಟಕ್ಕೆ

ಅಂಗನವಾಡಿ ತಾತ್ಕಲಿಕ ಆಯ್ಕೆ ಪಟ್ಟಿ ಸಿದ್ದ - ಆಕ್ಷೇಪಣೆ ಅರ್ಜಿ ಆಹ್ವಾನ- ವಿರುಪಾಕ್ಷಯ್ಯ ಸ್ವಾಮಿ

ಸಿರವಾರ,ಆ.28-

ಸಿರವಾರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕಂ ಕ್ರಷ್ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆ-08 ಮತ್ತು ಸಹಾಯಕಿಯರು-08 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿತ್ತು. ಅದರಂತೆ ಸದರಿ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳಿಗೆ ಆಯ್ಕೆ ಮಾಡಿರುವುದರಿಂದ ತಾತ್ಕಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸ್ವೀಕರಿಸುವ ದಿನಾಂಕ:-28-08-2026 ರಿಂದ ದಿ:-04-09-2026 ರವರೆಗೆ ಕಛೇರಿ ಸಮಯ ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 5:30 ರೊಳಗೆ



ಸಲ್ಲಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ವಿರುಪಾಕ್ಷಯ್ಯ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ, ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಸಿರವಾರ ಸಂಪರ್ಕಿಸಲು ತಿಳಿಸಿದ್ದಾರೆ.

ಸರಣಿ ಹತ್ಯೆ, ಅತ್ಯಾಚಾರ: ಸರ್ಕಾರದ ವಿರುದ್ಧ ಧ್ವನಿ ಎತ್ತಲು ಛಲವಾದಿಗೆ ಮನವಿ

ರಾಯಚೂರು,ಆ.28-

ಜಿಲ್ಲೆಯಲ್ಲಿ ಸರಣಿ ಹತ್ಯೆ, ಅತ್ಯಾಚಾರ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡುವಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ವಿಫಲವಾಗಿವೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ.) ಜಿಲ್ಲಾ ಸಮಿತಿ ಹಾಗೂ ಮಹಿಳಾ ಘಟಕ ಆರೋಪಿಸಿದೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಛಲವಾದಿ ಟಿ. ನಾರಾಯಣಸ್ವಾಮಿ ಅವರು ರಾಯಚೂರು ಭೇಟಿ ನೀಡಿದ ಸಂದರ್ಭದಲ್ಲಿ ಸಮಿತಿಯ ವತಿಯಿಂದ ಎರಡು ಪ್ರತ್ಯೇಕ ಮನವಿ ಪತ್ರಗಳನ್ನು ಸಲ್ಲಿಸಲಾಯಿತು. ರಾಜ್ಯ ಸಂಘಟನಾ ಸಂಚಾಲಕ ಎಂ. ಈರಣ್ಣ ಅವರು ಮನವಿ ಪತ್ರದಲ್ಲಿನ ವಿಷಯಗಳನ್ನು ಛಲವಾದಿ ಟಿ. ನಾರಾಯಣಸ್ವಾಮಿ ಅವರಿಗೆ ವಿವರಿಸಿದರು. ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಕುಮಾರಿ ಅಶ್ವಿನಿ ಅವರ ಅತ್ಯಾಚಾರ



ಮತ್ತು ಕೊಲೆ, ಲಿಂಗಸೂಗೂರು ತಾಲೂಕಿನ ಕರಡಕಲ್ ಗ್ರಾಮದ ರಾಣೆಮ್ಮ ಅವರ ಹತ್ಯಾಚಾರ ಹಾಗೂ ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ ಭೂಮಾನಂದ ಅವರ ಕೊಲೆ ಪ್ರಕರಣಗಳ ಕುರಿತು

3 ನೇ ಪುಟಕ್ಕೆ

ನಾಲ್ಕನೇ ಸಿಜೇರಿಯನ್ ವೇಳೆ ಜೀವಾಪಾಯದಲ್ಲಿದ್ದ ಮಹಿಳೆಗೆ ರಿಮ್ಸ್ ವೈದ್ಯರಿಂದ ಮರುಜೀವ

ತೀವ್ರ ರಕ್ತಸ್ರಾವದ ನಡುವೆಯೂ ಯಶಸ್ವಿ ಶಸ್ತ್ರಚಿಕಿತ್ಸೆ ವೈದ್ಯರು, ಸಿಬ್ಬಂದಿಗೆ ಕುಟುಂಬಸ್ಥರಿಂದ ಕೃತಜ್ಞತೆ

ರಾಯಚೂರು,ಆ.28-

ತೀವ್ರ ಹೊಟ್ಟೆ ನೋವು ಹಾಗೂ ಅಧಿಕ ರಕ್ತಸ್ರಾವದಿಂದ ಜೀವಾಪಾಯದಲ್ಲಿದ್ದ ತೆಲಂಗಾಣ ಮೂಲದ 37 ವರ್ಷದ ನರಸಮ್ಮ ಅವರನ್ನು ರಾಯಚೂರಿನ ರಿಮ್ಸ್ ಬೋಧಕ ಆಸ್ಪತ್ರೆಯ ಪ್ರಸೂತಿ ವಿಭಾಗದ ವೈದ್ಯರ ತಂಡ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿ ಪ್ರಾಣಾಪಾಯದಿಂದ ಪಾರು ಮಾಡಿದೆ.

ನರಸಮ್ಮ ಅವರು ಪತಿ ಸುರೇಶ್ ಅವರೊಂದಿಗೆ ಆ.25 ರಂದು ಚಿಕಿತ್ಸೆ ಗಾಗಿ ರಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದರು. ಈಗಾಗಲೇ ಮೂರು ಬಾರಿ ಸಿಜೇರಿಯನ್ ಹೆರಿಗೆ ಆಗಿದ್ದ ಅವರಿಗೆ ನಾಲ್ಕನೇ ಹೆರಿಗೆ



ಸಂದರ್ಭದಲ್ಲಿ ತೀವ್ರ ಹೊಟ್ಟೆ ನೋವು ಮತ್ತು ರಕ್ತಸ್ರಾವ ಕಾಣಿಸಿಕೊಂಡಿತ್ತು. 17ನೇ ವಾರದಲ್ಲೇ ತೀವ್ರ ರಕ್ತಸ್ರಾವ ಉಂಟಾಗಿ ಅವರ ಜೀವಕ್ಕೆ ಅಪಾಯದ ಪರಿಸ್ಥಿತಿ ಎದುರಾಗಿತ್ತು.

ತಕ್ಷಣ ಕಾರ್ಯಪ್ರವೃತ್ತರಾದ ರಿಮ್ಸ್ ಪ್ರಸೂತಿ ವಿಭಾಗದ ಮುಖ್ಯಸ್ಥೆ ಡಾ. ರಾಧಾ ಸಂಗವಿ ಅವರ ನೇತೃತ್ವದಲ್ಲಿ ಡಾ. ಕಾಂಚನ ಹಾಗೂ ಡಾ. ಕಾವ್ಯಶ್ರೀ ಒಳಗೊಂಡ ವೈದ್ಯರ ತಂಡ ಅಗತ್ಯ ಚಿಕಿತ್ಸೆ ನೀಡಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿತು.

ಅರವಳಿಕೆ ವಿಭಾಗದ ಮುಖ್ಯಸ್ಥ ಡಾ. ಕಿರಣ ನಾಯಕ ಅವರ ನೇತೃತ್ವದಲ್ಲಿ ಸಹ ಪ್ರಾಧ್ಯಾಪಕರಾದ ಡಾ. ಶ್ರೀಲೋಹಿತ್ ಹಾಗೂ ಡಾ. ಆಶಾ ಅವರ ತಂಡವೂ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರವಹಿಸಿತು. ನರ್ಸಿಂಗ್ ಆಫೀಸರ್ ಬುಳ್ಳಪ್ಪ ನಾಯಕ, ಒಟಿ ಮೇಲ್ವಿಚಾರಕ ಶ್ರೀ ಗಿರೀಶ್, ತಂತ್ರಜ್ಞರಾದ ಸವಿತಾ ಹಾಗೂ ಭಾಗ್ಯಮ್ಮ, ಡಿ-ಗ್ರೂಪ್ ಸಿಬ್ಬಂದಿಗಳಾದ ಸದಮಲ್ ಮತ್ತು ಕರಿಯಪ್ಪ ಸೇರಿದಂತೆ ವೈದ್ಯಕೀಯ ಹಾಗೂ ಸಹಾಯಕ ಸಿಬ್ಬಂದಿಯ ಸಹಕಾರದಿಂದ ಶಸ್ತ್ರಚಿಕಿತ್ಸೆ ಯಶಸ್ವಿಯಾಯಿತು.

ಸಮಯೋಚಿತ ಚಿಕಿತ್ಸೆ ಹಾಗೂ ವೈದ್ಯರ ತಂಡದ ಪರಿಣತಿಯಿಂದ

3 ನೇ ಪುಟಕ್ಕೆ

ಅಂಬೇಡ್ಕರ್ ವಸತಿ ಶಾಲೆ ಸ್ಥಳಾಂತರಕ್ಕೆ ಹಿಂದೇಟು ಕ್ರಮಕ್ಕೆ ಒತ್ತಾಯ

ರಾಯಚೂರು, ಆ.28-ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯನ್ನು ಸ್ಥಳಾಂತರ ಮಾಡದೇ ವಂಚನೆವಹಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಅಖಿಂಡ ಕರ್ನಾಟಕ ರಕ್ಷಣಾ ಸೇವಾ ದಳ ಜಿಲ್ಲಾ ಧ್ಯಕ್ಷರು ಆ. ಮ ನಡುಮನಿ ಅವರು ಲೋಕಯುಕ್ತರಿಗೆ ದೂರು ಸಲ್ಲಿಸಿ ಒತ್ತಾಯಿಸಿದ್ದಾರೆ.

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ಡಾ. ಬಿ. ಆರ್.ಅಂಬೇಡ್ಕರ್ ವಸತಿ ಶಾಲೆಯನ್ನು ರಾಯಚೂರು ತಾಲೂಕಿನ ಶಕ್ತಿನಗರದ ರಾಷ್ಟ್ರೀಯ ಹೆದ್ದಾರಿ 167 ರ ಮುಖ್ಯ ರಸ್ತೆಯಲ್ಲಿ ಹಲವು



ಲೋಪ ದೋಷಗಳಿಂದ ಕೂಡಿರುವ ತಾಜ್ ಹೋಟೆಲ್ ಎಂಬ ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಸ್ಥಳಾಂತರಿಸಲು ರಾಯಚೂರಿನಲ್ಲಿ ನಡೆದ ಜನತಾದರ್ಶನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ ಅವರ ಗಮನಕ್ಕೆ ತರಲಾಗಿತ್ತು. ಅದೇ ರೀತಿಯ ಜಿಲ್ಲಾಡಳಿತ ಸೇರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಇದುವರೆಗೂ ಯಾವುದೆ ರೀತಿ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ಸ್ಥಳಾಂತರಕ್ಕೆ ಸಮಾಜ ಕಲ್ಯಾಣ ಇಲಾಖೆಯವರು ದಿವ್ಯ ನಿರ್ಲಕ್ಷ್ಯವಹಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವಸತಿ ಶಾಲೆಯ ಹತ್ತಿರದಲ್ಲಿಯೇ ಸುಮಾರು 100 ಮೀಟರ್ ಅಂತರದಲ್ಲಿಯೇ ಬಾರ್ ಮತ್ತು ರೆಸ್ಟೋರೆಂಟ್ ಇದೆ. ವಸತಿ ಶಾಲೆ ಪಕ್ಕದಲ್ಲಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಎದುರಿಗೆ ಇದೆ. ಇದರಿಂದ ಉತ್ಪತ್ತಿಯಾಗುವ ಹಾರು

3 ನೇ ಪುಟಕ್ಕೆ

ಪಿಡಿಎ ಕಾಲೇಜಿನ 14ನೇ ಪದವಿ ಪ್ರದಾನ ಸಮಾರಂಭ



ಕಲಬುರಗಿ,ಆ.28-

ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಯಾದ ಪಿಡಿಎ ಕಾಲೇಜಿನ 14ನೇ ಪದವಿ ಪ್ರದಾನ ಸಮಾರಂಭವು ಆ.29ರಂದು ಬೆಳಿಗ್ಗೆ 10 ಗಂಟೆಗೆ ನಗರದ ಪಿಡಿಎ ಕಾಲೇಜಿನ ಸಭಾಂಗಣದಲ್ಲಿರುವ ಆಡಿಟೋರಿಯಂನಲ್ಲಿ ನಡೆಯಲಿದೆ. ಈ ಬಾರಿ 690 ಯುಜಿ ಹಾಗೂ 39 ಸ್ನಾತಕೋತ್ತರ (ಪಿಜಿ) ಸೇರಿದಂತೆ ಒಟ್ಟು 729 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ತಿಳಿಸಿದರು.

ನಗರದ ಪಿಡಿಎ ಕಾಲೇಜಿನ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಗೌರವ ಉಪಸ್ಥಿತರಾಗಿ ಪದವೀಧರರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಳಿನಿ ಅತುಲ್ ಮುಖ್ಯ ಅತಿಥಿಗಳಾಗಿ ಹಾಗೂ ಬೆಂಗಳೂರಿನ ಸಮ್ಮಿತ್ ಕನ್ಸಲ್ಟಿಂಗ್ ಸಂಸ್ಥೆಯ ಮುಖ್ಯಸ್ಥ ಮತ್ತು ಪಿಡಿಎ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂದೀಪ್ ಶರ್ಮಾ ಗೌರವ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಶೀಲ ನಮೋಶಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಸಂಸ್ಥೆಯ ಉಪಾಧ್ಯಕ್ಷ ರಾಜಾ ಬಿ. ಭೀಮಳ್ಳಿ, ಕಾರ್ಯದರ್ಶಿ ಉದಯಕುಮಾರ ಎಸ್. ಚಿಂಚೋಳಿ, ಜಂಟಿ ಕಾರ್ಯದರ್ಶಿ ಡಾ. ಕೈಲಾಶ ಬಿ. ಪಾಟೀಲ ಸೇರಿದಂತೆ ಆಡಳಿತ ಮಂಡಳಿ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಅಬ್ದುಲ್ಲಾ ದಾನಿಶ್‌ಗೆ 7 ಚಿನ್ನದ ಪದಕ :

2024-25ನೇ ಶೈಕ್ಷಣಿಕ ಸಾಲಿನಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳ ಪೈಕಿ ಅತ್ಯಧಿಕ ಗ್ರೇಡ್ ಪಾಯಿಂಟ್ ಗಳಿಸಿದ 19 ವಿದ್ಯಾರ್ಥಿಗಳಿಗೆ ಒಟ್ಟು 35 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು. ಕಂಪ್ಯೂಟರ್ ಸೈನ್ಸ್ ವಿಭಾಗದ ಅಬ್ದುಲ್ಲಾ ದಾನಿಶ್ ಅವರು ಅತ್ಯುತ್ತಮ ಸಾಧನೆ ಮಾಡಿ ಏಳು ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದು, ಚಿನ್ನದ ಹುಡುಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಜ್ವಲ್ ಜಿ. ಶಾಸ್ತ್ರಿ ಅವರು ಆರು ಚಿನ್ನದ ಪದಕಗಳನ್ನು ಪಡೆದು ಗಮನ ಸೆಳೆದಿದ್ದಾರೆ ಎಂದರು.

ಸಿವಿಲ್ ಎಂಜಿನಿಯರಿಂಗ್ ವಿಭಾಗದ ಅಭಿಷೇಕ್, ಎಲೆಕ್ಟ್ರಾನಿಕ್ಸ್ ವಿಭಾಗದ ತಲ್ಹಾ ಸುಫಿಯಾನ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ತಲ್ಹಾ ಅಮನ್ ಅಲಿ ಹಾಗೂ ಮಾಹಿತಿ ತಂತ್ರಜ್ಞಾನ ವಿಭಾಗದ ಸಾಗರ್ ತಲಾ ಎರಡು ಚಿನ್ನದ ಪದಕಗಳನ್ನು ಪಡೆದಿದ್ದಾರೆ. ವಿವಿಧ ವಿಭಾಗಗಳ ಇತರ 11 ವಿದ್ಯಾರ್ಥಿಗಳಿಗೂ ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು. ಸ್ನಾತಕೋತ್ತರ ವಿಭಾಗದಲ್ಲಿ ಮೂರು ಚಿನ್ನದ ಪದಕಗಳನ್ನು ಇಬ್ಬರು ವಿದ್ಯಾರ್ಥಿಗಳ ನಡುವೆ ಹಂಚಲಾಗುವುದು ಎಂದು ತಿಳಿಸಿದರು.

ಎಐ-ಎಂಎಲ್ ವಿದ್ಯಾರ್ಥಿಗೂ ಚಿನ್ನದ ಪದಕ :

ನೂತನವಾಗಿ ಆರಂಭಿಸಿರುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಮಷಿನ್ ಲರ್ನಿಂಗ್ ವಿಭಾಗದಲ್ಲಿ ಅತ್ಯಧಿಕ ಗ್ರೇಡ್ ಗಳಿಸುವ ವಿದ್ಯಾರ್ಥಿಗೆ ಹರಿಯಾಣ ಮೂಲದ ಉದ್ಯಮಿ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿನಿ ಇರಾ ಅಗರ್‌ವಾಲ್ ಅವರು ಚಿನ್ನದ ಪದಕವನ್ನು ಪ್ರಾಯೋಜಿಸುತ್ತಿದ್ದಾರೆ. ಇದೇ ರೀತಿ ಕಂಪ್ಯೂಟರ್ ಸೈನ್ಸ್ ಮತ್ತು ಡಿಸೈನ್ ವಿಭಾಗದ ವಿದ್ಯಾರ್ಥಿಗೆ ಕಾಲೇಜಿನ ವತಿಯಿಂದ ಚಿನ್ನದ ಪದಕವನ್ನು ಪ್ರಾಯೋಜಿಸಲಾಗಿದೆ.

ಪದವಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲು ಈಗಾಗಲೇ 450ಕ್ಕೂ ಹೆಚ್ಚು ಪದವೀಧರರು ನೋಂದಣಿ ಮಾಡಿಕೊಂಡಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪದವೀಧರರು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಶಶೀಲ ನಮೋಶಿ ಹೇಳಿದರು.

ಪಿಡಿಎ ಕಾಲೇಜಿನ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ತರಬೇತಿ ಹಾಗೂ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಸಮ್ಮಿತ್ ಕನ್ಸಲ್ಟಿಂಗ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಉದಯ ಚಿಂಚೋಳಿ, ಶರಣಬಸಪ್ಪ ಹರವಾಳ, ಅನಿಲ್ ಪಟ್ಟಣ, ಸಂಪತ್ ಲೋಯಾ, ಪ್ರಾಚಾರ್ಯ ಎಸ್.ಆರ್. ಪಾಟೀಲ್, ಎಸ್.ಆರ್. ಹೊಟ್ಟಿ, ಭಾರತಿ ಹರಸೂರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗುಳೆ ಹೋಗುವುದನ್ನು ತಡೆದು ಸ್ಥಳೀಯ ಉದ್ಯೋಗಕ್ಕೆ ಒತ್ತು: ಶಿವಕುಮಾರ್ ಘಾಟೆ



ಔರಾದ್,ಆ.28-

ಗ್ರಾಮೀಣ ಭಾಗದ ಜನರು ಉದ್ಯೋಗಕ್ಕಾಗಿ ಗುಳೆ ಹೋಗುವುದನ್ನು ತಡೆಗಟ್ಟುವ ಹಾಗೂ ಸ್ಥಳೀಯವಾಗಿಯೇ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ವಿಬಿಜಿ ರಾವ್ ಜಿ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಹೇಳಿದರು.

ತಾಲೂಕಿನ ಜಂಬಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹಾರಾಜವಾಡಿ ಗ್ರಾಮದಲ್ಲಿ ಗುರುವಾರ ವಿಬಿಜಿ ರಾವ್ ಜಿ ಯೋಜನೆಯಡಿ ನಡೆಯುತ್ತಿರುವ ಸಿಸಿಟಿ (ಕಾಂಟೂರ್ ಟ್ರೆಂಚ್) ಕಾಮಗಾರಿಯನ್ನು ವೀಕ್ಷಿಸಿ ಅವರು ಮಾತನಾಡಿದರು.

ಕೂಲಿ ಕಾರ್ಮಿಕರು ವಿಬಿಜಿ ರಾವ್ ಜಿ ಯೋಜನೆಯಡಿ ದ ’ ೂ ರ ’ ಯ ು ು ವ ’ ಉದ್ಯೋಗಾವಕಾಶವನ್ನು ಸದ್ಬಳಕೆ ಮಾಡಿಕೊಂಡು ಗ್ರಾಮದಲ್ಲಿಯೇ ಕೆಲಸ ನಿರ್ವಹಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಮಗಾರಿಯ ಪ್ರಗತಿ ಹಾಗೂ ಕೂಲಿ ಕಾರ್ಮಿಕರ ಹಾಜರಾತಿಯನ್ನು ಪರಿಶೀಲಿಸಿದ ಅವರು, ಸಿಸಿಟಿ ಕಾಮಗಾರಿ ಸ್ಥಳದಲ್ಲಿದ್ದ ಕೂಲಿ ಕಾರ್ಮಿಕರಿಗೆ ಬಾಳೆಹಣ್ಣು ವಿತರಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಿನೇಶ್ ರೆಡ್ಡಿ, ಡಿಇಒ ಶಿವಕುಮಾರ್ ಪಾರಾ, ಎನ್‌ಆರ್‌ಎಲ್‌ಎಂ ಸಿಬ್ಬಂದಿ, ಐಇಸಿ ಸಂಯೋಜಕ ಅಂಬಾದಾಸ್ ಪಾಟೀಲ್, ಶಿವಕುಮಾರ್ ಸಾದುರೆ ಸೇರಿದಂತೆ ಗ್ರಾಪಂ ಸಿಬ್ಬಂದಿ ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

ರಾಜ್ಯ ಸಚಿವ ಸಂಪುಟ ಬದಲಾವಣೆ ಬಗ್ಗೆ ಮಾಹಿತಿ ಇಲ್ಲ : ಮಲ್ಲಿಕಾರ್ಜುನ ಖರ್ಗೆ



ಕಲಬುರಗಿ,ಆ.28-

ರಾಜ್ಯ ಸಚಿವ ಸಂಪುಟದಲ್ಲಿ ಕೆಲ ಸಚಿವರ ಬದಲಾವಣೆ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಭೇಟಿ ನೀಡಿರುವ ವಿಚಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು.

ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಈಗ ಕಲಬುರಗಿಯಲ್ಲಿದ್ದೇನೆ. ಸಚಿವ ಸಂಪುಟದಲ್ಲಿ ಏನಾದರೂ ಬದಲಾವಣೆ ಮಾಡುವ ವಿಚಾರವಿದ್ದರೆ ಸಂಬಂಧಿಸಿದ ಕಡತಗಳು ನನ್ನ ಬಳಿಗೆ ಬರಬೇಕು. ಅವರು ಎಲ್ಲಿಗೆ ಹೋದರೂ ಫೈಲ್ ನನ್ನ ಬಳಿ ಬರಬೇಕು. ಫೈಲ್ ಬಂದ ನಂತರ ಈ ಬಗ್ಗೆ ಮಾಹಿತಿ ನೀಡುತ್ತೇನೆ ಎಂದು ಹೇಳಿದರು.

ನೇಪಾಳ ಪ್ರವಾಹ: ಮೃತರಿಗೆ ಖರ್ಗೆ ಸಂತಾಪ: ನೇಪಾಳದಲ್ಲಿ ಸಂಭವಿಸಿರುವ ಭೀಕರ ಪ್ರವಾಹದಲ್ಲಿ ಮೃತಪಟ್ಟವರಿಗೆ ಖರ್ಗೆ ಸಂತಾಪ ಸೂಚಿಸಿದರು. ನೇಪಾಳ ಪ್ರವಾಹದಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ಕರ್ನಾಟಕ ಸೇರಿದಂತೆ ದೇಶದ ವಿವಿಧ ಭಾಗಗಳ ಅನೇಕ ಜನರು ನೇಪಾಳದಲ್ಲಿ ಸಿಲುಕಿದ್ದಾರೆ. ನೂರಾರು ಜನರು ಪ್ರವಾಹದಲ್ಲಿ ಕೊಚ್ಚಿಹೋಗಿದ್ದು, ಹಲವರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಹೇಳಿದರು. ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯುವುದಾಗಿ ತಿಳಿಸಿದ ಖರ್ಗೆ, ನೇಪಾಳದಲ್ಲಿರುವ ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಜನರ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು ಹಾಗೂ ಮೃತಪಟ್ಟವರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಮನವಿ ಮಾಡುವುದಾಗಿ ಹೇಳಿದರು. ಸಂಕಷ್ಟದಲ್ಲಿರುವ ನೇಪಾಳದ ಜನರೊಂದಿಗೆ ಭಾರತ ನಿಲ್ಲಬೇಕು. ನೇಪಾಳಕ್ಕೆ ಸಾಧ್ಯವಾದಷ್ಟು ನೆರವು ನೀಡಬೇಕು ಎಂದು ಪ್ರಧಾನಿಗೆ ಪತ್ರ ಬರೆಯುತ್ತೇನೆ ಎಂದು ಖರ್ಗೆ ಹೇಳಿದರು.

ವಿದ್ಯಾರ್ಥಿಗಳು ಕ್ರೀಡೆ, ದೈಹಿಕ ಚಟುವಟಿಕೆಗಳಿಗೆ ಸಮಯ ಮೀಸಲಿಡಬೇಕು : ಪ್ರೊ.ಬಟ್ಟು ಸತ್ಯನಾರಾಯಣ

ಕಲಬುರಗಿ,ಆ.28-

ವಿದ್ಯಾರ್ಥಿಗಳು ತಮ್ಮ ದೈನಂದಿನ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಕಡ್ಡಾಯವಾಗಿ ಯಾವುದಾದರೂ ಒಂದು ಕ್ರೀಡೆಯಲ್ಲಿ ಭಾಗವಹಿಸಬೇಕು. ಪ್ರತಿದಿನ ದೈಹಿಕ ಚಟುವಟಿಕೆಗಳಿಗೆ ಸಮಯ ಮೀಸಲಿಡುವ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಕರೆ ನೀಡಿದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಕೇಂದ್ರ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಮೈ ಭಾರತ್ ವತಿಯಿಂದ ಆಯೋಜಿಸಿದ್ದ ಖೇಲೋ ಇಂಡಿಯಾ ಸಂವಾದ್‌ಖೇಲ್ ಕಿ ಬಾತ್, ಪಿಎಂ ಮೋದಿ ಕೆ ಸಾಥ್ ಕಾರ್ಯಕ್ರಮದಲ್ಲಿ ಸಿಯುಕೆ ವರ್ಚುವಲ್ ಮೂಲಕ ಭಾಗವಹಿಸಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕ್ರೀಡೆ ಮತ್ತು ವ್ಯಾಯಾಮವು ಉತ್ತಮ ಆರೋಗ್ಯ ಕಾಪಾಡುವುದರ ಜೊತೆಗೆ ಏಕಾಗ್ರತೆ, ಆತ್ಮವಿಶ್ವಾಸ ಹಾಗೂ ಮಾನಸಿಕ ಸದೃಢತೆಯನ್ನು ಹೆಚ್ಚಿಸುತ್ತದೆ. ಇದರಿಂದ ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳಲ್ಲಿಯೂ ಹೆಚ್ಚು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಸುಸಜ್ಜಿತ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣಗಳು, ಜಿಮ್‌ಗಳ ಸೌಲಭ್ಯ ಮತ್ತು ನುರಿತ ತರಬೇತುದಾರರ ಸೇವೆಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು. ಕ್ರೀಡೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಆರೋಗ್ಯ ಹಾಗೂ ದೈಹಿಕ ಸದೃಢತೆಯನ್ನು ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಯುವಜನರನ್ನು ಉದ್ದೇಶಿಸಿ ನೀಡಿದ



ಸಂದೇಶವು ಯುವ ಸಮುದಾಯದಲ್ಲಿ ಫಿಟ್ ಇಂಡಿಯಾ ಮನೋಭಾವವನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ, ವಿಕಸಿತ ಭಾರತ 2047 ನಿರ್ಮಾಣದ ರಾಷ್ಟ್ರೀಯ ಸಂಕಲ್ಪದಲ್ಲಿ ಯುವಜನರು ತಮ್ಮದೇ ಆದ ಕೊಡುಗೆ ನೀಡಲು ಪ್ರೇರಣೆ ನೀಡಲಿದೆ ಎಂದು ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದರು.

ಕಾನೂನು ಅಧ್ಯಯನ ಮತ್ತು ವಿದ್ಯಾರ್ಥಿ ಕಲ್ಯಾಣದ ಡೀನ್ ಪ್ರೊ. ಬಸವರಾಜ ಎಂ. ಕುಬಕಡ್ಡಿ ಮಾತನಾಡಿ, ಆರೋಗ್ಯವೇ ಭಾಗ್ಯ ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗದ ನೂತನ ವೆಬ್‌ಸೈಟ್‌ನ್ನು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅನಾವರಣಗೊಳಿಸಿದರು. ರಾಜ್ಯ ಹಾಗೂ ಜಿಲ್ಲಾ ಮಟ್ಟದ ಬಾಸ್ಕೆಟ್‌ಬಾಲ್ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ವಿಶ್ವವಿದ್ಯಾಲಯದ ಆಟಗಾರರಾದ ಸುರೇಶ್, ಸಿರಾಜುದ್ದೀನ್ ಹಾಗೂ ಸಂತೋಷ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈ ಭಾರತ್ ಕೇಂದ್ರದ ಜಿಲ್ಲಾ ಸಹಾಯಕ ನಿರ್ದೇಶಕ ಸುಮೀತ್ ಎಸ್. ಪಾರ್ಕಿ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಎಂ.ಎಸ್. ಪಾಸೋಡಿ, ಕಾರ್ಯಕ್ರಮ ಸಂಯೋಜಕ ಡಾ. ಮಲ್ಲಿಕಾರ್ಜುನ ಹೂಗಾರ, ಕ್ರೀಡಾ ಸಂಯೋಜಕ ಡಾ. ಸಾಯಿ ಅಭಿನವ ಸೇರಿದಂತೆ ವಿವಿಧ ವಿಭಾಗಗಳ ಡೀನ್‌ಗಳು, ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅನುದಾನಿತ ನೌಕರರಿಗೆ ಪಿಂಚಣಿ, ಕಾಲ್ಪನಿಕ ವೇತನ ಸೌಲಭ್ಯ ಕಲ್ಪಿಸಿ: ಶಶೀಲ್ ನಮೋಶಿ



ಕಲಬುರಗಿ,ಆ.28-

ಅನುದಾನಿತ ಶಾಲಾ-ಕಾಲೇಜುಗಳ ನೌಕರರ ಕಾಲ್ಪನಿಕ ವೇತನ ಹಾಗೂ ಪಿಂಚಣಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ನೀಡಿರುವ ತೀರ್ಪನ್ನು ರಾಜ್ಯ ಸರ್ಕಾರ ಕೂಡಲೇ ಪಾಲಿಸಿ, ಅನುದಾನಿತ ನೌಕರರಿಗೆ ನ್ಯಾಯ ಒದಗಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ. ನಮೋಶಿ ಆಗ್ರಹಿಸಿದರು.

ಕಲಬುರಗಿಯ ಚಾಂದಬೀಬಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಕಾನೂನು ಸಲಹಾ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯ ಪಿಂಚಣಿ ಹಾಗೂ ಕಾಲ್ಪನಿಕ ವೇತನಕ್ಕೆ ಸಂಬಂಧಿಸಿದಂತೆ ಸರ್ಕಾರ ಸಲ್ಲಿಸಿದ್ದ ರಿಟ್ ಅಪೀಲು ಸಂಖ್ಯೆ 2476/2015 ಹಾಗೂ 2467/2015 ಪ್ರಕರಣಗಳು 2026ರ ಜು.24ರಂದು ಇತ್ಯರ್ಥಗೊಂಡಿದ್ದು, ಅನುದಾನಿತ ಸಿಬ್ಬಂದಿಯ ಪರವಾಗಿ ಮಹತ್ವದ ತೀರ್ಪು ಹೊರಬಿದ್ದಿದೆ ಎಂದು ನಮೋಶಿ ತಿಳಿಸಿದರು.

ನ್ಯಾಯಾಲಯದ ತೀರ್ಪು ಹೊರಬಂದಿರುವುದನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ತೀರ್ಪಿನ ಮಾಹಿತಿ ಇನ್ನೂ ಸರ್ಕಾರಕ್ಕೆ ತಲುಪಿಲ್ಲ, ಮಾಹಿತಿ ಬಂದ ಬಳಿಕ ಪರಿಶೀಲಿಸಲಾಗುವುದು ಎಂದು ಸದನದಲ್ಲಿ ಉತ್ತರಿಸಲಾಗಿದೆ. ಹೀಗಾಗಿ ಸರ್ಕಾರ ಯಾವುದೇ ವಿಳಂಬ ಮಾಡದೆ ತೀರ್ಪಿನ ಸಂಪೂರ್ಣ ಮಾಹಿತಿಯನ್ನು ಪರಿಶೀಲಿಸಿ ಅನುದಾನಿತ ನೌಕರರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಅನುದಾನಿತ ನೌಕರರಿಗೆ ಹೊಸ ಪಿಂಚಣಿ ವ್ಯವಸ್ಥೆಯೂ ಇಲ್ಲ, ಹಳೆಯ ಪಿಂಚಣಿ ಸೌಲಭ್ಯವೂ ಇಲ್ಲ. ಇದರಿಂದ ನಿವೃತ್ತಿಯ ನಂತರ ಅನೇಕ ನೌಕರರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಕಾಲ್ಪನಿಕ ವೇತನ ಸೇರಿದಂತೆ ವಿವಿಧ ಸೌಲಭ್ಯಗಳಿಗಾಗಿ ತಾವು ವಿಧಾನಮಂಡಲದ ಒಳಗೂ ಹೊರಗೂ ನಿರಂತರವಾಗಿ ಹೋರಾಟ ನಡೆಸಿಕೊಂಡು ಬಂದಿರುವುದಾಗಿ ಹೇಳಿದರು.

''ಅನುದಾನಿತ ನೌಕರರ ಸಮಸ್ಯೆ ನನಗೆ ಸಂಪೂರ್ಣವಾಗಿ ತಿಳಿದಿದೆ. ಸರ್ಕಾರ ನ್ಯಾಯಾಲಯದ ವಿಚಾರವನ್ನು ಮುಂದಿಟ್ಟುಕೊಂಡು ಸಮಸ್ಯೆಯನ್ನು ಮುಂದೂಡುತ್ತಾ ಬಂದಿದೆ. ಇದೀಗ ನ್ಯಾಯಾಲಯದ ತೀರ್ಪು ಹೊರಬಿದ್ದಿರುವುದರಿಂದ ಮತ್ತಷ್ಟು ವಿಳಂಬ ಮಾಡಲು ಯಾವುದೇ ಕಾರಣವಿಲ್ಲ'' ಎಂದು ಹೇಳಿದರು. ತಮ್ಮ ಸರ್ಕಾರದ ಅವಧಿಯಲ್ಲಿ ಶಾಶ್ವತ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ 1987ರಿಂದ 1992ರವರೆಗೆ ಹಾಗೂ 1992ರಿಂದ 1995ರವರೆಗೆ ಅನುದಾನ ನೀಡುವ ವ್ಯವಸ್ಥೆ ಮಾಡಲಾಗಿತ್ತು. ಆದರೆ ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹೊಸ ಸಂಸ್ಥೆಗಳಿಗೆ ಅನುದಾನ ನೀಡುವ ಯಾವುದೇ ವ್ಯವಸ್ಥೆ ಮಾಡಿಲ್ಲ ಎಂದು ಟೀಕಿಸಿದರು.

''ಸರ್ಕಾರ ಮತ್ತೊಮ್ಮೆ ವಿಳಂಬ ಮಾಡುವ ಉದ್ದೇಶದಿಂದ ಮೇಲ್ಮನವಿ ಸಲ್ಲಿಸಲು ಮುಂದಾದರೆ, ಅನುದಾನಿತ ನೌಕರರೊಂದಿಗೆ ನಾನೂ ನಿಲ್ಲುತ್ತೇನೆ. ಅವರು ಕೈಗೊಳ್ಳುವ ಯಾವುದೇ ರೀತಿಯ ಹೋರಾಟಕ್ಕೂ ನನ್ನ ಸಂಪೂರ್ಣ ಬೆಂಬಲವಿದೆ. ಅನುದಾನಿತ ನೌಕರರಿಗೆ ಪಿಂಚಣಿ ಹಾಗೂ ಕಾಲ್ಪನಿಕ ವೇತನದ ಸೌಲಭ್ಯ ದೊರೆಯುವವರೆಗೆ ಹೋರಾಟದಿಂದ ಹಿಂದೆ ಸರಿಯುವುದಿಲ್ಲ'' ಎಂದು ಶಶೀಲ್ ಜಿ. ನಮೋಶಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ರಾಜ್ಯಾಧ್ಯಕ್ಷ ಜಿ. ಹನುಮಂತಪ್ಪ, ರಾಜ್ಯ ಸಂಘದ ಕಾನೂನು ಘಟಕದ ಅಧ್ಯಕ್ಷ ಹೆಚ್. ನಾಗರಾಜ, ಕಾರ್ಯಾಧ್ಯಕ್ಷ ಕೃಷ್ಣ ಮಾಗಣಗೇರಿ, ಇಸಾಮುದ್ದಿನ್ ಖಾಜಿ, ಲಕ್ಷ್ಮೀಕಾಂತ, ಐ.ಕೆ. ಪಾಟೀಲ್ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ನೌಕರರು ಉಪಸ್ಥಿತರಿದ್ದರು.

ರೈತರನ್ನು ನೆಲದ ಮೇಲೆ ಕೂರಿಸಿ ಸಭೆ: ಅಧಿಕಾರಿಗಳ ವಿರುದ್ಧ ಆಕ್ರೋಶ



ಕಲಬುರಗಿ,ಆ.28-

ಸಿಮೆಂಟ್ ಕಂಪನಿಗಳ ವಿರುದ್ಧ ರೈತರು ಪ್ರತಿಭಟನೆ ನಡೆಸಲು ಮುಂದಾಗಿರುವ ಹಿನ್ನೆಲೆಯಲ್ಲಿ ಸೇಡಂ ಸಹಾಯಕ ಆಯುಕ್ತರ ಕಚೇರಿಯಲ್ಲಿ ಗುರುವಾರ ಸಂಜೆ ಆಯೋಜಿಸಿದ್ದ ಸಭೆಯಲ್ಲಿ ರೈತರಿಗೆ ಸೂಕ್ತ ಆಸನ ವ್ಯವಸ್ಥೆ ಕಲ್ಪಿಸದೆ ನೆಲದ ಮೇಲೆ ಕೂರಿಸಿ ಸಭೆ ನಡೆಸಿರುವುದಕ್ಕೆ ಹೋರಾಟಗಾರರು ಹಾಗೂ ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಭೆಯಲ್ಲಿ ಸೇಡಂ ಸಹಾಯಕ ಆಯುಕ್ತ ಪ್ರಭುರೆಡ್ಡಿ, ತಹಶೀಲ್ದಾರ್ ಶ್ರೀಯಾಂಕ ಎ. ಧನಶ್ರೀ, ಚಿತ್ತಾಪುರ, ಶಹಾಬಾದ್ ಹಾಗೂ ಚಿಂಚೋಳಿ ತಾಲೂಕುಗಳ ತಹಸೀಲ್ದಾರರು, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕೈಗಾರಿಕಾ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕಲಬುರಗಿ ಜಿಲ್ಲೆಯಲ್ಲಿರುವ ಸಿಮೆಂಟ್ ಕಂಪನಿಗಳು ಸರ್ಕಾರದ ಸುತ್ತೋಲೆಗಳು, ಆದೇಶಗಳು, ನಡಾವಳಿಗಳು ಹಾಗೂ ಕಾಯ್ದೆ-ಕಾನ’ೂನ’ುಗ’ಳ’ನ್ನು ಉಲ್ಲಂಘಿಸಿವೆ ಎಂಬ ಆರೋಪ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಕಂಪನಿಗಳಿಗೆ ನೀಡಿರುವ ವಿನಾಯಿತಿಗಳು, ಪರವಾನಗಿಗಳು, ರಿಯಾಯಿತಿಗಳು ಹಾಗೂ ಮಂಜೂರಾತಿಗಳನ್ನು ರದ್ದುಪಡಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರೈತರು ಹಾಗೂ ಹೋರಾಟಗಾರರು ಒತ್ತಾಯಿಸುತ್ತಿದ್ದಾರೆ.

ಈ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಲಬುರಗಿ ಜಿಲ್ಲಾಧಿಕಾರಿ ಕಚೇರಿಗೆ ಬೀಗ ಹಾಕಿ, ಮೂರು ವಿಧದ ಮುಳ್ಳು ಬಡಿದು ಪ್ರತಿಭಟನೆ ನಡೆಸಲು ರೈತರು ಮುಂದಾಗಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಸಭೆ ಕರೆದಿದ್ದರು ಎನ್ನಲಾಗಿದೆ.

ಆದರೆ, ರೈತರ ಸಮಸ್ಯೆಗಳನ್ನು ಆಲಿಸಲು ಕರೆದ ಸಭೆಯಲ್ಲಿ ಅವರಿಗೆ ಸೂಕ್ತ ಆಸನ ವ್ಯವಸ್ಥೆ ಕಲ್ಪಿಸದೆ ನೆಲದ ಮೇಲೆ ಕೂರಿಸಿ ಸಭೆ ನಡೆಸಿರುವುದು ಅಧಿಕಾರಿಗಳ ರೈತಪರ ಕಾಳಜಿಯನ್ನೇ ಪ್ರಶ್ನಿಸುವಂತಾಗಿದೆ ಎಂದು ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರೈತರೊಂದಿಗೆ ಗ ೌ ರ ’ ವ ’ ಯ ು ತ ’ ವ ಾ ಗಿ ನಡೆದುಕೊಳ್ಳಬೇಕಾದ ಅಧಿಕಾರಿಗಳೇ ಅವರನ್ನು ನೆಲದ ಮೇಲೆ ಕೂರಿಸಿರುವುದು ಖಂಡನೀಯ. ರೈತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಬೇಡಿಕೆಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳುವ ಬದಲು ಈ ರೀತಿಯ ವರ್ತನೆ ತೋರಿರುವುದು ಸರಿಯಲ್ಲ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಹಾಯಕ ಆಯುಕ್ತ ಪ್ರಭುರೆಡ್ಡಿ ಹಾಗೂ ತಹಸೀಲ್ದಾರ್ ಶ್ರೀಯಾಂಕ ಧನಶ್ರೀ ಅವರ ನಡೆಗೆ ಸ್ಥಳೀಯರು ಹಾಗೂ ಹೋರಾಟಗಾರರು ವಿರೋಧ ವ್ಯಕ್ತಪಡಿಸಿದ್ದು, ರೈತರೊಂದಿಗೆ ಸಭೆ ನಡೆಸುವಾಗ ಕನಿಷ್ಠ ಶಿಷ್ಟಾಚಾರ ಹಾಗೂ ಗೌರವ ಕಾಪಾಡಬೇಕು ಎಂದು ಆಗ್ರಹಿಸಿದ್ದಾರೆ.

ಒಂದನೇಯ ಪುಟದಿಂದ

ಸರ್ಕಾರದ ವಿರುದ್ಧ ಧ್ವನಿ ಎತ್ತಲು ಛಲವಾದಿಗೆ ಮನವಿ

ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರಕರಣಗಳನ್ನು ವಿಧಾನಮಂಡಲದ ಸದನದಲ್ಲಿ ಗಂಭೀರವಾಗಿ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯಬೇಕು. ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ರಕ್ಷಣೆ, ಪರಿಹಾರ ಹಾಗೂ ಅರ್ಹತೆ ಆಧಾರದಲ್ಲಿ ಉದ್ಯೋಗ ನೀಡಬೇಕು. ಘಟನೆಗಳಿಂದ ಆತಂಕಕ್ಕೊಳಗಾಗಿರುವ ಕುಟುಂಬಗಳು ಮತ್ತು ಜನರಲ್ಲಿ ಮಾನಸಿಕ ಸ್ಥೈರ್ಯ ತುಂಬಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಕಾರ್ಮಿಕರಿಗೆ ಪರಿಷ್ಕೃತ ಕನಿಷ್ಠ ವೇತನ ನೀಡಲು ಒತ್ತಾಯ

ಇದೇ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ರಾಯಚೂರು ಜಿಲ್ಲಾ ವಸತಿ ನಿಲಯಗಳಲ್ಲಿ ಅಡುಗೆ ಆಳು, ಅಡುಗೆಯವರು, ಕಾವಲುಗಾರರು ಹಾಗೂ ಕಂಪ್ಯೂಟರ್ ಆಪರೇಟರ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಪರಿಷ್ಕೃತ ಕನಿಷ್ಠ ವೇತನ ನೀಡುವಂತೆ ಮತ್ತೊಂದು ಮನವಿ ಸಲ್ಲಿಸಲಾಯಿತು.

2026-27ನೇ ಸಾಲಿಗೆ ಕಾರ್ಮಿಕ ಇಲಾಖೆಯಿಂದ ಹೊಸ ಕನಿಷ್ಠ ವೇತನ ದರಗಳ ಆದೇಶ ಹೊರಡಿಸಿದ್ದರೂ, ಹಣಕಾಸು ಇಲಾಖೆಯಿಂದ ಅಗತ್ಯ ಅನುದಾನ ಮಂಜೂರಾಗದ ಕಾರಣ ಕಾರ್ಮಿಕರಿಗೆ ಪರಿಷ್ಕೃತ ವೇತನ ಪಾವತಿಯಾಗಿಲ್ಲ ಎಂದು ಸಮಿತಿ ತಿಳಿಸಿದೆ.

ದಿನಾಂಕ 25-05-2026ರ ಅಧಿಸೂಚನೆಯು ಕೇಂದ್ರ ಸರ್ಕಾರದ , 2019ಕ್ಕೆ ಅನುಗುಣವಾಗಿದೆಯೇ ಎಂಬುದನ್ನು ಪರಿಶೀಲಿಸಿ, ಈ ಕುರಿತು ಸಚಿವ ಸಂಪುಟ ಉಪಸಮಿತಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರನ್ನು ಕರೆದು ಚರ್ಚಿಸಬೇಕು. ಹೊಸ ಕನಿಷ್ಠ ವೇತನವನ್ನು ತಕ್ಷಣ ಮಂಜೂರು ಮಾಡಿ, ಕಾರ್ಮಿಕರಿಗೆ ಬರಬೇಕಿರುವ ಬಾಕಿ ವೇತನವನ್ನು ಅವರ ಖಾತೆಗಳಿಗೆ ಜಮಾ ಮಾಡುವಂತೆ ಸರ್ಕಾರಕ್ಕೆ ಸೂಚಿಸಬೇಕು ಎಂದು ಮನವಿ ಮಾಡಿದರು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಸಮಿತಿ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀದೇವಿ, ಉಪಾಧ್ಯಕ್ಷರಾದ ನರಸಿಂಗಮ್ಮ, ಉರುಕುಂದಮ್ಮ, ಗಿರಿಜಮ್ಮ, ಖಜಾಂಚಿ ಗೀತಾ ಹಾಗೂ ರಾಜ್ಯ ಸಂಘಟನಾ ಸಂಚಾಲಕ ಎಂ. ಈರಣ್ಣ ಉಪಸ್ಥಿತರಿದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶುದ್ಧೀಕರಣ ಘಟಕ ಕೆಟ್ಟು ಸಿಬ್ಬಂದಿ ಪರದಾಟ

ಘಟಕಗಳ ಕುರಿತು ಜಿಲ್ಲಾಡಳಿತ ಸಮಗ್ರ ಪರಿಶೀಲನೆ ನಡೆಸಿ, ಕೆಟ್ಟುಹೋಗಿರುವ ಘಟಕಗಳನ್ನು ತಕ್ಷಣ ದುರಸ್ತಿಗೊಳಿಸಿ, ಬಳಕೆಗೆ ಯೋಗ್ಯವಲ್ಲದ ಘಟಕಗಳ ಬದಲಿಗೆ ಹೊಸ ವ್ಯವಸ್ಥೆ ಕಲ್ಪಿಸಬೇಕು. ಸಾರ್ವಜನಿಕರ ತೆರಿಗೆ ಹಣದಲ್ಲಿ ಖರೀದಿಸಿರುವ ಕುಡಿಯುವ ನೀರಿನ ಘಟಕಗಳು ಕೇವಲ ಕಚೇರಿಯ ಗೋಡೆಯನ್ನು ಅಲಂಕರಿಸುವ ಸಾಧನಗಳಾಗದೆ, ನಿಜವಾಗಿಯೂ ಜನರಿಗೆ ಸೇವೆ ನೀಡುವಂತಾಗಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನಾಲ್ಕನೇ ಸಿಜೇರಿಯನ್ ವೇಳೆ ಜೀವಾಪಾಯದಲ್ಲಿದ್ದ ಮಹಿಳೆಗೆ ರಿಮ್ಸ್ ವೈದ್ಯರಿಂದ ಮರುಜೀವ

ನರಸಮ್ಮ ಅವರು ಪ್ರಾಣಾಪಾಯದಿಂದ ಪಾರಾಗಿದ್ದು, ಪ್ರಸ್ತುತ ಆರೋಗ್ಯ ಸ್ಥಿತಿ ಸುಧಾರಿಸಿದೆ ಎಂದು ತಿಳಿದುಬಂದಿದೆ.

ರಿಮ್ಸ್ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯ ಸೇವೆಗೆ ನರಸಮ್ಮ ಮತ್ತು ಅವರ ಪತಿ ಸುರೇಶ್ ಹರ್ಷ ವ್ಯಕ್ತಪಡಿಸಿ, ರಿಮ್ಸ್ ನಿರ್ದೇಶಕರು, ವೈದ್ಯಕೀಯ ಅಧೀಕ್ಷಕರು, ಪ್ರಾಂಶುಪಾಲರು, ಜಿಲ್ಲಾ ಶಸ್ತ್ರಚಿಕಿತ್ಸಕರು, ಶುಶ್ರೂಷಕ ಅಧೀಕ್ಷಕರು, ಆಡಳಿತ ವರ್ಗ, ವೈದ್ಯಕೀಯ ಸಿಬ್ಬಂದಿ ಹಾಗೂ ಸಹಾಯಕ ಸಿಬ್ಬಂದಿಗೆ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

ಸಂತ್ರಸ್ತ ಮತದಾರರ ಸಾಕ್ಷ್ಯಗಳೊಂದಿಗೆ ಪ್ರತಿಭಟನೆ; ದೋಷಪೂರಿತ ಪ್ರಕ್ರಿಯೆ ಸ್ಥಗಿತಕ್ಕೆ ಆಗ್ರಹ

ಎಂದರು. 2002ರ ಮತದಾರರ ಪಟ್ಟಿಯೊಂದಿಗೆ ಲಿಂಕ್ ಮಾಡುವ ಪ್ರಕ್ರಿಯೆಯಲ್ಲಿಯೂ ಗೊಂದಲಗಳಿವೆ. ಎಲ್ಲ ನಾಗರಿಕರಿಗೂ ಹಳೆಯ ದಾಖಲೆಗಳು ಸುಲಭವಾಗಿ ಲಭ್ಯವಿಲ್ಲದ ಸಂದರ್ಭದಲ್ಲಿ ಅದನ್ನೇ ಆಧಾರವಾಗಿಟ್ಟುಕೊಂಡು ಮತದಾರರ ಮೇಲೆ ಅನುಮಾನ ವ್ಯಕ್ತಪಡಿಸುವುದು ಸರಿಯಲ್ಲ ಎಂದು ಹೇಳಿದರು.

ಎಸ್‌ಐಆರ್ ಆರಂಭದಿಂದಲೇ ನಾಗರಿಕ ಸಂಘಟನೆಗಳು ಜನರಲ್ಲಿ ಜಾಗೃತಿ ಮೂಡಿಸುವುದು, ಮತದಾರರಿಗೆ ನೆರವು ನೀಡುವುದು ಹಾಗೂ ಬಿಎಲ್‌ಒಗಳಿಗೆ ಸಹಕಾರ ನೀಡುವ ಮೂಲಕ ರಚನಾತ್ಮಕವಾಗಿ ಕಾರ್ಯನಿರ್ವಹಿಸಿವೆ. ಆದರೂ ಕರಡು ಮತದಾರರ ಪಟ್ಟಿ ಪ್ರಕಟಿಸಿರುವ ರೀತಿಗೆ ತೀವ್ರ ಆಕ್ಷೇಪವಿದೆ ಎಂದು ತಿಳಿಸಿದರು.

''ಮತದಾರರು ಯಾವುದೇ ಅಪರಾಧ ಮಾಡದಿದ್ದರೂ ಸ್ಥಳಾಂತರ, ಕೆಲಸದ ನಿಮಿತ್ತ ಊರಿನಲ್ಲಿ ಇಲ್ಲದಿರುವುದು ಅಥವಾ ಪ್ರಕ್ರಿಯೆಯಲ್ಲಿನ ಲೋಪಗಳಿಂದಾಗಿ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು ಪ್ರಜಾಪ್ರಭುತ್ವ ವಿರೋಧಿ'' ಎಂದು ಶರಣಗೌಡ ಕುಮಾರ್ ಹೇಳಿದರು.

ಎಸ್‌ಐಆರ್ ಪ್ರಕ್ರಿಯೆ ರೂಪಿಸಿ ಜಾರಿಗೊಳಿಸಿರುವ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು, ಚುನಾವಣಾ ಆಯೋಗದ ನೇಮಕಾತಿ ಪ್ರಕ್ರಿಯೆಯಲ್ಲಿ ನಿಷ್ಪಕ್ಷಪಾತತೆ ಖಚಿತಪಡಿಸಬೇಕು ಹಾಗೂ ದೋಷಪೂರಿತ ಎಸ್‌ಐಆರ್ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಅವರು ಆಗ್ರಹಿಸಿದರು.

ಈ ಬೇಡಿಕೆಗಳ ಈಡೇರಿಕೆಗೆ ಸೆ.1ರಂದು ಸಂತ್ರಸ್ತ ಮತದಾರರ ಸಾಕ್ಷ್ಯಗಳೊಂದಿಗೆ ಎಲೆಕ್ಷನ್ ಕಮಿಷನ್ ಚಲೋ ನಡೆಸಲಾಗುವುದು. ಅಗತ್ಯವಿದ್ದರೆ ಎಸ್‌ಐಆರ್ ಪ್ರಕ್ರಿಯೆ ವಿರುದ್ಧ ನ್ಯಾಯಾಲಯದ ಮೊರೆ ಹೋಗುವುದಾಗಿಯೂ ಅವರು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಆಂಜಿನೇಯ್ಯ ಕುರುಬದೊಡ್ಡಿ, ಅಸಿಮುದ್ದಿನ್, ಮಾರೆಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

ದಲಿತರ ಕೊಲೆ ನಡೆಯುತ್ತಿದೆ; ಗೃಹ ಸಚಿವರು ಆರ್‌ಎಸ್‌ಎಸ್ ಹೇಳಿಕೆಯಲ್ಲಿ ಬ್ಯುಸಿ: ಛಲವಾದಿ ನಾರಾಯಣಸ್ವಾಮಿ

ಗೃಹ ಸಚಿವರನ್ನಾಗಿ ನೇಮಿಸಬೇಕು ಎಂದು ಆಗ್ರಹಿಸಿದರು. ಕಳೆದ 15 ದಿನಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ದಲಿತ ಯುವಕನ ಕೊಲೆ ಹಾಗೂ ಇಬ್ಬರು ಮಹಿಳೆಯರ ಅತ್ಯಾಚಾರ ಮತ್ತು ಕೊಲೆ ನಡೆದಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ. ಈ ಪ್ರಕರಣಗಳು ವಿಧಾನಮಂಡಲದ ಅಧಿವೇಶನದಲ್ಲಿ ಚರ್ಚೆಯಾಗಬೇಕಿತ್ತು. ಆದರೆ ಎರಡು ದಿನ ಮುಂಚಿತವಾಗಿಯೇ ಅಧಿವೇಶನವನ್ನು ಮೊಟಕುಗೊಳಿಸಿದ್ದರಿಂದ ಈ ಗಂಭೀರ ವಿಷಯವನ್ನು ಸದನದಲ್ಲಿ ಚರ್ಚಿಸಲು ಸಾಧ್ಯವಾಗಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅನ್ಯಾಯಕ್ಕೊಳಗಾದ ಕುಟುಂಬಗಳಿಗೆ ಸಾಂತ್ವನ ಹೇಳಲು ಕರಡಕಲ್‌ಗೆ ಭೇಟಿ ನೀಡಿರುವುದಾಗಿ ತಿಳಿಸಿದ ಅವರು, ರಾಣೆಮ್ಮ ಕುಟುಂಬಕ್ಕೆ ಸರ್ಕಾರ ಕೂಡಲೇ 2 ಎಕರೆ ಜಮೀನು ಹಾಗೂ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಈ ಬೇಡಿಕೆ ಈಡೇರಿಸಲು ಸರ್ಕಾರದ ಮೇಲೆ ಒತ್ತಡ ಹೇರುವುದಾಗಿ ಹೇಳಿದರು. ರಾಜ್ಯದಲ್ಲಿ ದಲಿತರ ಕೊಲೆಗಳು ನಡೆಯುತ್ತಿದ್ದರೂ ಅನ್ಯಾಯಕ್ಕೊಳಗಾದ ಕುಟುಂಬಗಳನ್ನು ಭೇಟಿ ಮಾಡಿ ಸಾಂತ್ವನ ಹೇಳುವ ಸೌಜನ್ಯವನ್ನು ಸರ್ಕಾರದ ಯಾವುದೇ ಸಚಿವರು ತೋರಿಸುತ್ತಿಲ್ಲ. ಅಧಿಕಾರಿಗಳೂ ಕೂಡ ವಸ್ತುಸ್ಥಿತಿಯನ್ನು ಸಮರ್ಪಕವಾಗಿ ಪರಿಶೀಲಿಸಿ ವರದಿ ಸಲ್ಲಿಸುವ ಬದಲು ಕೇವಲ ಸರ್ಕಾರದ ಆದೇಶಗಳನ್ನು ತಲುಪಿಸುವ ಪೋಸ್ಟ್‌ಮನ್‌ಗಳಂತೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಜಿಲ್ಲಾ ಕಾರ್ಯದರ್ಶಿ ರವೀಂದ್ರ ಜಲ್ದಾರ್ ರುದ್ರಯ್ಯ, ನಾಗಭೂಷಣ, ಜಗನ್ನಾಥ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಲ್ಯಾಣಕ್ಕಾಗಿ ಸೋಪಿ ಸಂತರು-ಶರಣರಿಂದ ಪಾದಯಾತ್ರೆ

ಸ್ಮರಣೆಯಲ್ಲಿ ನಡೆಯುವ ಈ ಪಾದಯಾತ್ರೆಯಲ್ಲಿ ಮುಖಂಡರು ಆದ ಆರ್. ಎಮ್. ರೇವಡಿ ಸಾಹುಕಾರ್ ಹುಣಸಗಿ. ರವಿಚಂದ್ರ ಸಾಹುಕಾ.-ಆಲ್ದಾಳ ಯಮನಪ್ಪ ದೊರೆ. ಬಸವರಾಜ ಜಾನಕರ ಚನ್ನಪ್ಪ. ವೆಂಕಟೇಶ್. ಹೈಯಣ್ಣ. ಪಿರಸಾಬ. ಲಕ್ಷ್ಮಣ್ಣ. ಕುರಕುದಿ. ಸಿದ್ದಣ್ಣಗೌಡ ಹಂದ್ರಾಳ. ದೇವಪುರ ಮತ್ತು ಸುತ್ತಮುತ್ತಲ ಗ್ರಾಮಗಳಾದ ಅರಳಹಳ್ಳಿ . ಆಲ್ದಾಳ್. ಶೇಳ್ಳಿಗಿ. ಕವಡಿಮಟ್ಟಿ. ಹಾವಿನಾಳ. ಮತ್ತುನಾಗರಾಳ ಗ್ರಾಮದ ಶ್ರಾವಣ ಮಾಷದ ಶಿವನ ಭಕ್ತಾದಿಗಳಿಂದ ಪಾದಯಾತ್ರೆ ಮತ್ತು ಮುಂತಾದ ಗ್ರಾಮದಿಂದ ಸರ್ವಧರ್ಮದ ಸಾವಿರಾರು ಭಕ್ತರು ಕೂಡ ಭಾಗವಹಿಸಿದರು ಎಂದು ರವಿ ಮುತ್ತ್ಯಾ ಕಲಿಕೆರಿ ತಿಳಿಸಿದರು. ಭಕ್ತರಿಗೆ ಪ್ರಸಾದ ವೈವಸ್ಥೆ ಅರಳಹಳ್ಳಿ. ಮತ್ತು ತಿಂಥಣಿಯಲ್ಲಿ ವ್ಯವಸ್ಥೆ ಮಾಡಲಾಯಿತು ಮತ್ತು ಪೊಲೀಸ್ ಇಲಾಖೆಯವರಿಗೆ ಮತ್ತು ಮಾಧ್ಯಮ ಮಿತ್ರರಿಗೆ ಕೃತಜ್ಞತೆ ಸಲ್ಲಿಸಿದರು

ಆ.30ರಂದು ನಾರಾಯಣ ಗುರು, ಡಿ.ದೇವರಾಜ ಅರಸು ಜಯಂತ್ಯೋತ್ಸವ : ಡಾ.ಸೇಡಂಕರ್



ಬೀದರ್,ಆ.28-

ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ಒಕ್ಕೂಟ ಹಾಗೂ ಬೀದರ್ ಜಿಲ್ಲಾ ಆರ್ಯ ಈಡಿಗ ಸಮಾಜಗಳ ಸಹಯೋಗದಲ್ಲಿ ಆ.30ರಂದು ನಗರದ ಬೆಲ್ದಾಳೆ ಕನ್ವೆನ್ಷನ್ ಹಾಲ್‌ನಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಮತ್ತು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಜಯಂತ್ಯೋತ್ಸವ ಹಾಗೂ ಕೆಪಿಸಿಸಿ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಡಾ. ರಾಜಶೇಖರ್ ಸೇಡಂಕರ್ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.30ರಂದು ಬೆಳಿಗ್ಗೆ 9 ಗಂಟೆಗೆ ನಗರದ ಶಿವಾಜಿ ಚೌಕ್‌ನಿಂದ ಅಲಂಕೃತ ರಥದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರದ ಮೆರವಣಿಗೆ ಆರಂಭವಾಗಲಿದೆ. ಮೆರವಣಿಗೆಯು ಬಸವೇಶ್ವರ ವೃತ್ತ ಹಾಗೂ ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಸಾಯಿ ಶಾಲೆಯ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದರು.

ಈ ಹಿಂದೆ ಪ್ರತ್ಯೇಕ ಸಮುದಾಯಗಳಿಂದ ಆಚರಿಸಲಾಗುತ್ತಿದ್ದ ನಾರಾಯಣ ಗುರು ಮತ್ತು ದೇವರಾಜ ಅರಸು ಜಯಂತಿಯನ್ನು ಈ ಬಾರಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ವಿವಿಧ ಶೋಷಿತ ಸಮುದಾಯಗಳು ಒಗ್ಗೂಡಿ ಆಚರಿಸುತ್ತಿರುವುದು ವಿಶೇಷವಾಗಿದೆ ಎಂದರು.

ಸಂವಿಧಾನ ಸಂರಕ್ಷಣಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಅನಿಲಕುಮಾರ್ ಬೆಲ್ದಾರ್ ಮಾತನಾಡಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿಗಣತಿ) ವರದಿಯನ್ನು ರಾಜ್ಯ ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕು. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು ಎಂಬ ಒತ್ತಾಯದೊಂದಿಗೆ ಶೋಷಿತ ಸಮುದಾಯಗಳ ಒಕ್ಕೂಟದ ಸಮಾವೇಶವನ್ನೂ ಆಯೋಜಿಸಲಾಗಿದೆ ಎಂದು ಹೇಳಿದರು.

2015ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನ್ಯಾಯವಾದಿ ಕಾಂತರಾಜು ಅವರ ಅಧ್ಯಕ್ಷತೆಯಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ನಡೆಸಲು ಆದೇಶಿಸಿತ್ತು. ವರದಿ ಸಿದ್ಧವಾಗುವ ವೇಳೆಗೆ ಸರ್ಕಾರ ಬದಲಾದ ಹಿನ್ನೆಲೆಯಲ್ಲಿ ಅದು ಮುಂದಿನ ಹಂತಕ್ಕೆ ಸಾಗಲಿಲ್ಲ. ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳ ಅವಧಿಯಲ್ಲಿಯೂ ವರದಿ ಸ್ವೀಕಾರ ಮತ್ತು ಬಿಡುಗಡೆ ಕುರಿತು ನಿರ್ಧಾರವಾಗಿರಲಿಲ್ಲ ಎಂದು ವಿವರಿಸಿದರು.

ಒಕ್ಕೂಟದ ಗೌರವಾಧ್ಯಕ್ಷ ಬಸವರಾಜ್ ಮಾಳಗೆ ಮಾತನಾಡಿ, 2023ರಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಮಧುಸೂಧನ್ ನಾಯಕ್ ಅವರ ನೇತೃತ್ವದಲ್ಲಿ ವರದಿ ಸಿದ್ಧವಾಗಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಆದ್ದರಿಂದ ವರದಿಯನ್ನು ಸಾರ್ವಜನಿಕಗೊಳಿಸಿ, ಅದರ ಆಧಾರದ ಮೇಲೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿಗೆ ಶೇ.17, ಪರಿಶಿಷ್ಟ ಪಂಗಡಕ್ಕೆ ಶೇ.7 ಹಾಗೂ ಹಿಂದುಳಿದ ವರ್ಗಗಳಿಗೆ ಶೇ.40ರಷ್ಟು ಮೀಸಲಾತಿ ಕಲ್ಪಿಸಬೇಕು. ಸಂವಿಧಾನದ ಆಶಯದಂತೆ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ದೊರೆಯುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಮ್ಮ ಮನವಿಗೆ ಸ್ಪಂದಿಸದೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸದಿದ್ದರೆ, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ವಿರುದ್ಧವೂ ಬೀದಿಗಿಳಿದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಆರ್ಯ ಈಡಿಗ ಸಮಾಜದ ಅಧ್ಯಕ್ಷ ಸುಭಾಷ ಚಿದ್ರಿ ಮಾತನಾಡಿ, ಒಬಿಸಿ ಆರ್ಮಿ ಒಕ್ಕೂಟದ ಅಧ್ಯಕ್ಷ ತಾನಾಜಿ ಸಗರ್ ಹಾಗೂ ಈಡಿಗ ಸಮಾಜದ ಸಂಗಯ್ಯ ಸುಲ್ತಾನಪುರ್, ಒಬಿಸಿ ಆರ್ಮಿ ಕಾರ್ಯಾಧ್ಯಕ್ಷ ರಾಜಕುಮಾರ್ ಟಿಳ್ಳೆಕರ್ ಶೋಷಿತ ಸಮುದಾಯಗಳ ಮುಖಂಡ ಸುನಿಲ್ ಖಾಶೆಂಪುರ್ ಗೊಂಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ತುಕಾರಾವ್ ಚಿಮಕೊಡೆ, ಆರೋಗ್ಯ ಕವಚ ಸದಸ್ಯ ಶಿವಕುಮಾರ್ ನೀಲಿಕಟ್ಟಿ, ಬಿವಿಎಸ್ ಜಿಲ್ಲಾಧ್ಯಕ್ಷ ಪ್ರದೀಪ್ ನಾಟೇಕರ್ ಶ್ರೀಪತರಾವ್ ದೀನೆ ಹಾಗೂ ಶ್ರೀಮಂತ್ ತೆಲಂಗ ಇದ್ದರು.

ಕಲಬುರಗಿ ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಲು ಕೃಷಿಕ ಸಮಾಜದ ಆಗ್ರಹ



ಆಳಂದ,ಆ.28-

ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಕಲಬುರಗಿ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಅನಾವೃಷ್ಟಿಯಿಂದ ತೊಂದರೆಗೊಳಗಾಗಿರುವ ಜಿಲ್ಲೆಯನ್ನು ತಕ್ಷಣ ಬರಪೀಡಿತವೆಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಸಿದ್ರಾಮಪ್ಪ ಪಾಟೀಲ ಧಂಗಾಪುರ ಆಗ್ರಹಿಸಿದರು.

ಕೃಷಿ ಸಚಿವರಾಗಿ ಪಿ.ಎಂ. ನರೇಂದ್ರಸ್ವಾಮಿ ಅವರು ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಜಿಲ್ಲಾ ಕೃಷಿಕ ಸಮಾಜದ ವತಿಯಿಂದ ಅವರನ್ನು ಅಭಿನಂದಿಸಿದ ಸಿದ್ರಾಮಪ್ಪ ಪಾಟೀಲ ಧಂಗಾಪುರ ಅವರು, ರೈತರ ನಿಯೋಗದೊಂದಿಗೆ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಕಳೆದ ವರ್ಷ ಅತಿವೃಷ್ಟಿಯಿಂದ ಬೆಳೆ ಹಾನಿಯಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್ ನಿಯಮಗಳಡಿ ರಾಜ್ಯ ಸರ್ಕಾರ ಪರಿಹಾರ ನೀಡಿದ್ದರಿಂದ ರೈತರಿಗೆ ಕೊಂಚ ನೆಮ್ಮದಿ ದೊರೆತಿತ್ತು. ಈ ವರ್ಷವೂ ರೈತರು ಸಾಲ ಮಾಡಿ ಬೀಜ, ರಸಗೊಬ್ಬರ ಖರೀದಿಸಿ ಮುಂಗಾರು ಬಿತ್ತನೆ ಕೈಗೊಂಡಿದ್ದಾರೆ. ಆದರೆ ಸಮರ್ಪಕ ಮಳೆಯಾಗದ ಕಾರಣ ಬಿತ್ತನೆಯಾದ ಬೆಳೆಗಳು ಬಾಡುತ್ತಿದ್ದು, ಹಲವು ಪ್ರದೇಶಗಳಲ್ಲಿ ಮಳೆಯ ಕೊರತೆಯಿಂದ ಬಿತ್ತನೆಯೇ ಸಾಧ್ಯವಾಗಿಲ್ಲ ಎಂದು ಸಚಿವರ ಗಮನಕ್ಕೆ ತಂದರು.

ಜಿಲ್ಲಾ ಕೃಷಿಕ ಸಮಾಜ ಹಾಗೂ ಕೃಷಿ ಇಲಾಖೆ ವತಿಯಿಂದ ರೈತರಲ್ಲಿ ಬೆಳೆ ವಿಮೆ ಕುರಿತು ನಿರಂತರ ಜಾಗೃತಿ ಮೂಡಿಸಿದ್ದರಿಂದ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬೆಳೆ ವಿಮೆ ಮಾಡಿಸಿದ್ದಾರೆ. ಅನಾವೃಷ್ಟಿಯಿಂದ ಬೆಳೆಗಳು ಹಾನಿಗೊಳಗಾಗುತ್ತಿರುವ ಹಿನ್ನೆಲೆಯಲ್ಲಿ ಬೆಳೆ ವಿಮೆ ಮಾಡಿಸಿರುವ ರೈತರಿಗೆ ಮಧ್ಯಂತರ ಪರಿಹಾರವನ್ನು ತ್ವರಿತವಾಗಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯ ರೈತರ ಪರವಾಗಿ ಹಾಗೂ ಜಿಲ್ಲಾ ಕೃಷಿಕ ಸಮಾಜದ ವತಿಯಿಂದ ಕೃಷಿ ಸಚಿವ ಹಾಗೂ ರಾಜ್ಯ ಕೃಷಿಕ ಸಮಾಜದ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅವರಿಗೆ ಮನವಿ ಸಲ್ಲಿಸಿ, ರೈತರ ಸಂಕಷ್ಟಕ್ಕೆ ಕೂಡಲೇ ಸ್ಪಂದಿಸುವಂತೆ ಒತ್ತಾಯಿಸಲಾಗಿದೆ ಎಂದು ಸಿದ್ರಾಮಪ್ಪ ಪಾಟೀಲ ಧಂಗಾಪುರ ತಿಳಿಸಿದರು.

ಈ ಸಂದರ್ಭದಲ್ಲಿ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಬಸವರಾಜ ಪಾಟೀಲ ಉಡಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

32 ವರ್ಷಗಳ ಸೇವೆಯಿಂದ ಶಿಕ್ಷಕ ವೃತ್ತಿಯ ಘನತೆ ಹೆಚ್ಚಿಸಿದ ಮಾರುತಿ ಸುತಾರ್ ಅರುಣಕುಮಾರ ಪಾಟೀಲ್



ಅಫಜಲಪುರ,ಆ.28-

ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು. ಅದರ ಘನತೆ ಮತ್ತು ಗೌರವವನ್ನು ವರ್ಣಿಸಲು ಸಾಧ್ಯವಿಲ್ಲ. ಶಿಕ್ಷಕ ಮಾರುತಿ ಸುತಾರ್ ಅವರು 32 ವರ್ಷಗಳ ಕಾಲ ಸಹಶಿಕ್ಷಕರಾಗಿ ಹಾಗೂ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸುವ ಮೂಲಕ ಶಿಕ್ಷಕ ವೃತ್ತಿಯ ಘನತೆ ಮತ್ತು ಗೌರವವನ್ನು ಮತ್ತಷ್ಟು ಹೆಚ್ಚಿಸಿದ್ದಾರೆ ಎಂದು ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಎಂ.ವೈ. ಪಾಟೀಲ್ ಹೇಳಿದರು.

ತಾಲೂಕಿನ ಮಾಶಾಳ ಗ್ರಾಮದ ಶ್ರೀ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಮುಖ್ಯಶಿಕ್ಷಕ ಮಾರುತಿ ಸುತಾರ್ ಅವರ ವಯೋನಿವೃತ್ತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹತ್ವದ ಜವಾಬ್ದಾರಿ ಶಿಕ್ಷಕರ ಮೇಲಿದೆ. ಈ ಜವಾಬ್ದಾರಿಯನ್ನು ಅರಿತು ಮಾರುತಿ ಸುತಾರ್ ಅವರು ಪ್ರಾಮಾಣಿಕತೆ ಹಾಗೂ ಬದ್ಧತೆಯಿಂದ ಸೇವೆ ಸಲ್ಲಿಸಿದ್ದು, ಅವರ ಸೇವೆ ಇತರ ಶಿಕ್ಷಕರಿಗೂ ಮಾದರಿಯಾಗಿದೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ನಿತಿನ್ ಗುತ್ತೇದಾರ್ ಮಾತನಾಡಿ, ವಿದ್ಯಾರ್ಥಿಗಳ ಮನಸ್ಸನ್ನು ಗೆದ್ದು ಬೋಧಿಸುವ ಶಿಕ್ಷಕರು ತಮ್ಮ ವೃತ್ತಿಯ ಘನತೆ ಹಾಗೂ ಗೌರವವನ್ನು ಹೆಚ್ಚಿಸುತ್ತಾರೆ. ಮಾರುತಿ ಸುತಾರ್ ಅವರು ತಮ್ಮ ಸುದೀರ್ಘ ಸೇವಾವಧಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಶ್ರೀ ನಿರಂಜನ ಪ್ರಣವ ಮಹಾಸ್ವಾಮಿಗಳು, ಜೇವರ್ಗಿ ತಾಲೂಕಿನ ಶಿಕ್ಷಣ ಸಂಯೋಜಕ ಲಕ್ಷ್ಮಣ ಝಳಕಿ, ವಿಶ್ವನಾಥ ರೇವೂರ, ಚಂದ್ರಶೇಖರ ಬರಗಾಲೆ ಹಾಗೂ ಬಾಬಾಸಾಹೇಬ ಆಲೂರ ಮಾತನಾಡಿದರು.

ಕಾರ್ಯಕ್ರಮದಲ್ಲಿ ವೈಜುನಾಥ ಲಿಂಗದಳ್ಳಿ, ಚಂದ್ರಾಮಪ್ಪ ಪೂಜಾರಿ, ದುಂಡಪ್ಪ ಪೂಜಾರಿ, ಶಿವಪುತ್ರಪ್ಪ ಜಿಡ್ಡಗಿ, ರಾಮಲಿಂಗಯ್ಯ ಮಠ, ಅಶೋಕ ದೇಸಾಯಿ, ಗುರುಸಿದ್ದಯ್ಯ ನಂದಿಮಠ, ಯಲ್ಲಪ್ಪ ಪ್ಯಾಟಿ, ದೇಸು ಚಹ್ವಾಣ, ನಾರಾಯಣ ಅಂಬೂರೆ, ಶಂಕರ ನಾವಿ, ಸಂಗಪ್ಪ ಮ್ಯಾಳೇಸಿ, ಹುಸೇನಿ ಮುಜಾವರ, ಭೀಮಣ್ಣ ವಾಯಿ, ಜಗನ್ನಾಥ ಮೋರೆ, ಕಾಳಪ್ಪ ಸುತಾರ, ಗುರಪ್ಪ ಕಾಳಿ, ಶಿವಾನಂದ ರೇವೂರ ಸೇರಿದಂತೆ ಗ್ರಾಮಸ್ಥರು ಹಾಗೂ ಬಂಧುಬಳಗದವರು ಉಪಸ್ಥಿತರಿದ್ದರು.

ನಾಗಬಸಂದೇಗಾಂವ ಕಾರ್ಯಕ್ರಮ ನಿರೂಪಿಸಿದರು. ಸೋಮಯ್ಯ ಹಿರೇಮಠ ಪ್ರಾರ್ಥನೆ ಸಲ್ಲಿಸಿ, ಸ್ವಾಗತಿಸಿದರು.

ಅಂಬೇಡ್ಕರ್ ವಸತಿ ಶಾಲೆ ಸ್ಥಳಾಂತರಕ್ಕೆ ಹಿಂದೇಟು ಕ್ರಮಕ್ಕೆ ಒತ್ತಾಯ

ಬೂದಿಯು ಗಾಳಿಯಲ್ಲಿ ಮಿಶ್ರಣ ವಾಗಿ ವಿದ್ಯಾರ್ಥಿಗಳಿರುವ ವಸತಿ ಶಾಲೆಯ ಕೋಣೆಯಲ್ಲಿ ಬೀಳುತ್ತಿದ್ದು ಇದರಿಂದ ವಿದ್ಯಾರ್ಥಿಗಳ ಆರೋಗ್ಯಕ್ಕೆ ತೊಂದರೆಯಾಗುತ್ತಿದೆ.ಇದುವರೆಗೂ ವಸತಿ ಶಾಲೆಯ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳದೇ ನಿರ್ಲಕ್ಷವಹಿಸಿದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ರಾಯಚೂರು ಪ್ರಭಾರಿ ಉಪನಿರ್ದೇಶಕರಾದ ಪ್ರವೀಣ ಕುಮಾರ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ಇವರಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಡಾ.ಮಲ್ಲಿಕಾರ್ಜುನ ನಾಸಿಗೆ ಗ್ಲೋಬಲ್ ಐಕಾನಿಕ್ ಅಚೀವ್‌ಮೆಂಟ್ ಪ್ರಶಸ್ತಿ-2026

ಕಲಬುರಗಿ,ಆ.28-

ಕರ್ನಾಟಕ ಜಾನಪದ ಪರಿಷತ್ತಿನ ಕೇರಳ ಘಟಕದ ಅಧ್ಯಕ್ಷ, ಹಿರಿಯ ವೈದ್ಯ ಹಾಗೂ ಶ್ರೇಷ್ಠ ಹೊರನಾಡ ಕನ್ನಡಿಗ ಪ್ರಶಸ್ತಿ ಪುರಸ್ಕೃತ ಡಾ. ಮಲ್ಲಿಕಾರ್ಜುನ ಎಸ್. ನಾಸಿ ಅವರಿಗೆ ಪ್ರತಿಷ್ಠಿತ ಗ್ಲೋಬಲ್ ಐಕಾನಿಕ್ ಅಚೀವ್‌ಮೆಂಟ್ ಪ್ರಶಸ್ತಿ-2026 ನೀಡಿ ಗೌರವಿಸಲಾಗಿದೆ.

ನವದೆಹಲಿಯಲ್ಲಿ ಗ್ಲೋಬಲ್ ಅಚೀವರ್ಸ್ ಕೌನ್ಸಿಲ್ ವತಿಯಿಂದ ಆಯೋಜಿಸಿದ್ದ ಗ್ಲೋರಿ ಆಫ್ ಇಂಡಿಯಾ ಅವಾರ್ಡ್‌2026 ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಛತ್ತೀಸ್‌ಗಢದ ವಸತಿ ಮತ್ತು ನಗರಾಭಿವೃದ್ಧಿ ಸಚಿವ ತೋಖನ್ ಸಾಹು ಅವರು ಡಾ. ನಾಸಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಸಮಾಜ ಸೇವೆ, ನಾಯಕತ್ವ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಡಾ. ಮಲ್ಲಿಕಾರ್ಜುನ ಎಸ್. ನಾಸಿ ಅವರು ಸಲ್ಲಿಸಿರುವ ಗಮನಾರ್ಹ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯದ ಹಿಂದಿ ಸಲಹಾ ಸಮಿತಿ ಸದಸ್ಯೆ ವೈಶಾಲಿ ತೋಮರ್, ಡಾ.ಜಿ.ಶಿವಬಾಲ ಮುರುಗನ್, ಡಾ.ಶೈಜು ಡೊಲ್ಪಿ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿದ್ದರು.

ಕಲಬುರಗಿಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ: ನಿತಿನ್ ಗುತ್ತೇದಾರ್ ಆಗ್ರಹ

ಅಫಜಲಪುರ,ಆ.28-

ಮಳೆ ಕೊರತೆಯಿಂದ ಕಲಬುರಗಿ ಜಿಲ್ಲೆಯಲ್ಲಿ ಸಾವಿರಾರು ಎಕರೆ ಪ್ರದೇಶದ ಬೆಳೆಗಳು ಒಣಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದರೂ, ರಾಜ್ಯ ಸರ್ಕಾರ ಘೋಷಿಸಿರುವ ಬರಗಾಲ ಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಅಫಜಲಪುರ ಸೇರಿದಂತೆ ಜಿಲ್ಲೆಯ ಯಾವುದೇ ತಾಲೂಕುಗಳನ್ನು ಸೇರ್ಪಡೆ ಮಾಡದಿರುವುದು ಖಂಡನೀಯ ಎಂದು ಜಿಪಂ ಮಾಜಿ ಅಧ್ಯಕ್ಷ ನಿತಿನ್ ಗುತ್ತೇದಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭೆ ಚುನಾವಣೆಯಲ್ಲಿ ಕಲಬುರಗಿ ಜಿಲ್ಲೆಯ ಜನರು ಕಾಂಗ್ರೆಸ್ ಪಕ್ಷಕ್ಕೆ ನಿರೀಕ್ಷೆಗೂ ಮೀರಿದ ಬೆಂಬಲ ನೀಡಿದ್ದರು. ಆದರೆ, ಬರಗಾಲ ಘೋಷಣೆ ಮಾಡುವ ಸಂದರ್ಭದಲ್ಲಿ ಇಡೀ ಜಿಲ್ಲೆಯನ್ನು ಕಡೆಗಣಿಸಿರುವುದು ಜಿಲ್ಲೆಯ ರೈತರಿಗೆ ಮಾಡಿರುವ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಮಳೆ ಕೊರತೆ ಎದುರಿಸುತ್ತಿರುವ ಜಿಲ್ಲೆಯ ಎಲ್ಲ ತಾಲೂಕುಗಳನ್ನು ತಕ್ಷಣ ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಿಸಬೇಕು. ಬೆಳೆ ನಷ್ಟ ಅನುಭವಿಸಿರುವ ರೈತರಿಗೆ ಪ್ರತಿ ಎಕರೆಗೆ ₹25 ಸಾವಿರ ಪರಿಹಾರ ನೀಡಬೇಕು. ಆಡಳಿತ ಪಕ್ಷದ ಶಾಸಕರು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿ ಜಿಲ್ಲೆಯ ರೈತರ ನೆರವಿಗೆ ಧಾವಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಯುವಜನರು ಮಾತನಾಡುತ್ತಿದ್ದಾರೆ

ಸರಕಾರಿ ಶಾಲೆಗಳ ಬಗ್ಗೆ ಯುವ ಜನರು ಮಾತನಾಡುತ್ತಿರುವುದು ದೇಶದ ಪಾಲಿಗೆ ನಿಜಕ್ಕೂ ಹೊಸತು. ದೇಶಾದ್ಯಂತ ಸಹಸ್ರಾರು ಸರಕಾರಿ ಶಾಲೆಗಳು ಒಂದರ ಹಿಂದೆ ಒಂದರಂತೆ ಮುಚ್ಚುತ್ತಿರುವುದರ ಬಗ್ಗೆ ಶಿಕ್ಷಣ ತಜ್ಞರು ತಮ್ಮ ಕಳವಳನ್ನು ವ್ಯಕ್ತಪಡಿಸುತ್ತಲೇ ಇದ್ದರು. ಆದರೆ ಸರಕಾರ ಜಾಣ ಕಿವುಡನಂತೆ ವರ್ತಿಸುತ್ತಾ ಬಂದಿದೆ. ಇದೀಗ ಮೊದಲ ಬಾರಿಗೆ, ಯುವಜನರು ಸರಕಾರಿ ಶಾಲೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ರಾಜಸ್ಥಾನ ಸೇರಿದಂತೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಜೆನ್‌ಝಿಗಳು ಹಮ್ಮಿಕೊಂಡಿರುವ ಸರಕಾರಿ ಶಾಲೆ ಉಳಿಸಿ ಆಂದೋಲನ ಆಳುವವರನ್ನು ಬೆಚ್ಚಿ ಬೀಳಿಸಿದೆ. ಯುವ ತಲೆಮಾರು ದೇಶದ ಭವಿಷ್ಯದ ಬಗ್ಗೆ ಮಾತನಾಡುತ್ತಿರುವುದು, ದೇಶದ ಮೇಲಿನ ಕಾಳಜಿಯಿಂದ ಬೀದಿಗಿಳಿಯುತ್ತಿರುವುದು ಆಳುವವರಿಗೆ ತಲೆನೋವು ತಂದಿದೆ. ಜೆನ್ ಝಿ ಬೆನ್ನಿಗೇ ಇದೀಗ ಜೆನ್ ಆಲ್ಫಾ ಕೂಡ ದೇಶದ ಬಗ್ಗೆ ಮಾತನಾಡತೊಡಗಿದೆ.

ಪ್ರಜಾತಂತ್ರವು ಹೊರಳುದಾರಿಗೆ ತಲುಪಿದಾಗ ಅದನ್ನು ಮತ್ತೆ ಸರಿದಾರಿಗೆ ತರುವ ಜವಾಬ್ದಾರಿ ಯಾರದು? ನೀಟ್ ಪರೀಕ್ಷೆಯ ಅವ್ಯವಹಾರಗಳ ಹಿನ್ನೆಲೆಯಲ್ಲಿ ಆರಂಭವಾದ ಯುವಜನರ ಪ್ರತಿಭಟನೆ, ಅದರ ಪರಿಣಾಮವಾಗಿ ಕೇಂದ್ರ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನರ ರಾಜೀನಾಮೆ ಮತ್ತು ಆ ನಂತರ ಎಚ್ಚರಗೊಂಡ ಆಳುವ ಪಕ್ಷದ ನಾಯಕರು ಯುವಜನರ ಭವಿಷ್ಯದ ಬಗ್ಗೆ ತೋರಿಸುವ ಆಸಕ್ತಿ ಈ ಪ್ರಶ್ನೆಯನ್ನು ಮುನ್ನೆಲೆಗೆ ತಂದಿದೆ.

2024ರ ಲೋಕಸಭೆಯ ಚುನಾವಣೆಯಲ್ಲಿ ನಿರೀಕ್ಷೆಯು ಹುಸಿಯಾಗಿ ಭಾರತೀಯ ಜನತಾ ಪಕ್ಷ (ಭಾಜಪ)ಕ್ಕೆ ಪೂರ್ಣ ಬಹುಮತ ಸಿಗದೆ ಪ್ರಾದೇಶಿಕ ಪಕ್ಷಗಳ ಬೆಂಬಲದಿಂದ ಮೂರನೆಯ ಬಾರಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ನರೇಂದ್ರ ಮೋದಿಯವರು ತಮ್ಮ ಅಧಿಕಾರವನ್ನು ಭದ್ರಗೊಳಿಸಲು ವಿಭಿನ್ನ ದಾರಿಗಳನ್ನು ಬಳಸಿಕೊಂಡರು. ಸಂಸತ್ತು, ನ್ಯಾಯಾಂಗ ಮತ್ತು ಚುನಾವಣಾ ಆಯೋಗಗಳನ್ನು ದುರ್ಬಲಗೊಳಿಸಿ, ಪ್ರಾದೇಶಿಕ ಪಕ್ಷಗಳನ್ನು ವಿಭಜಿಸಿ ತಮ್ಮ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಬಳಿ ಸೆಳೆದುಕೊಂಡರು. ಮೋದಿಯವರ ವ್ಯಕ್ತಿ ಕೇಂದ್ರೀಕೃತ ಆಡಳಿತವು ಭದ್ರವಾಗುತ್ತಿದ್ದಂತೆ ಪ್ರಜಾಸತ್ತೆಯ ಕಂಬಗಳು ದುರ್ಬಲಗೊಂಡವು. ತಮ್ಮತಮ್ಮದೇ ಅಜೆಂಡಾ ಮತ್ತು ಆಂತರಿಕ ಸಮಸ್ಯೆಗಳಿಂದಾಗಿ ವಿರೋಧ ಪಕ್ಷಗಳು ಸಂಸತ್ತಿನಲ್ಲಿಯೂ ಅದರ ಹೊರಗೂ ಸರಕಾರವನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಲಿಲ್ಲ.

ಇತಿಹಾಸದಆಡಿಯೋ ಪುಸ್ತಕಗಳನ್ನು ಕೇಳುವುದು

ಈ ಸನ್ನಿವೇಶದಲ್ಲಿ ಅನಿರೀಕ್ಷಿತವಾಗಿ ದೇಶದ ಯುವಜನರು ಜುಲೈ ತಿಂಗಳಲ್ಲಿ ಬೀದಿಗಿಳಿದು ತಮ್ಮ ಪ್ರತಿಭಟನೆಗಳ ಮೂಲಕ ಎಚ್ಚರಿಕೆಯ ಸಂದೇಶವನ್ನು ಎನ್‌ಡಿಎ ಸರಕಾರಕ್ಕೆ ನೀಡಿದ್ದಾರೆ. ಈ ಯುವಜನತೆಗೆ ಯಾವುದೇ ಸಂಘಶಕ್ತಿ, ಸಂಪನ್ಮೂಲಗಳು, ಅನುಭವಿ ನಾಯಕರು ಇರಲಿಲ್ಲ. ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯ ಮೂರ್ತಿ ಸೂರ್ಯಕಾಂತ್ ಅವರು ನಿರುದ್ಯೋಗಿ ಯುವಕರನ್ನು ಕಾಕ್ರೋಚ್ (ಜಿರಳೆ) ಎಂದು ಟೀಕಿಸಿದ್ದರ ವಿರುದ್ಧ ಅದೇ ಹೆಸರಿನಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಎಂದು ಕರೆದುಕೊಂಡು ಪ್ರತಿಭಟನೆಗೆ ಮುಂದಾದ ಚಳವಳಿಯ ನಾಯಕರು ರಾಜಕೀಯಕ್ಕೆ ಹೊಸಬರು.

ಇಂಗ್ಲಿಷ್ ಭಾಷೆಯಲ್ಲಿ ಜೆನ್ ಝಿ ಎಂದು ಕರೆಯಲ್ಪಡುವ ಸುಮಾರು 14ರಿಂದ 29 ವರ್ಷ ವಯಸ್ಸಿನ ಅಂದರೆ 1997 ಮತ್ತು 2012ರ ಅವಧಿಯಲ್ಲಿ ಜನಿಸಿದ ಈ ಯುವಕರು ಮತ್ತು ಯುವತಿಯರಿಗೆ ಯಾವುದೇ ಪಕ್ಷಗಳ ಕಟ್ಟುಪಾಡುಗಳಿಲ್ಲ. ಭಾಷೆ, ಜಾತಿ, ಧರ್ಮ, ಬಡವ-ಬಲ್ಲಿದ ಸ್ತ್ರೀ-ಪುರುಷರೆಂಬ ಮನುಷ್ಯ ನಿರ್ಮಿತ ಚೌಕಟ್ಟುಗಳಿಂದ ಹೊರಬಂದು ಒಂದು ನಿರ್ದಿಷ್ಟ ಉದ್ದೇಶದ ಸಾಧನೆಯನ್ನು ಗುರಿಯಾಗಿಟ್ಟು ಒಟ್ಟು ಸೇರಿದವರು. ಸಮಷ್ಟಿಯ ಹಿತ ಅವರನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿತು.

ಉಡುಗೆ ತೊಡುಗೆ, ವರ್ತನೆ, ಭಾಷೆಯ ಬಳಕೆ, ಆಹಾರ ಪದ್ಧತಿ ಹೀಗೆ ಪ್ರತಿಯೊಂದರಲ್ಲಿಯೂ ತಮ್ಮದೇ ನಡೆಯನ್ನು ಅನುಸರಿಸುವ ಹೊಸ ಪೀಳಿಗೆಯವರ ಪ್ರತಿಭಟನೆಯ ಮಾದರಿಯೂ ವಿಶಿಷ್ಟವೇ. ಕೈಬರಹದ ಭಿತ್ತಿಪತ್ರಗಳು, ವ್ಯಂಗ್ಯ ಚಿತ್ರಗಳು, ನಗು ಬರಿಸುವ ವೀಡಿಯೊಗಳು(), ವಿಶಿಷ್ಟ ಘೋಷಣೆಗಳು, ಅಣಕುವೇಷಗಳು, ಕೆಲವೊಮ್ಮೆ ವೈಯಕ್ತಿಕ ನೆಲೆಯಲ್ಲಿ ಬಳಸುವ ಸಾರ್ವಜನಿಕವಾಗಿ ಅಸಭ್ಯವೆನಿಸುವ ಪದಗಳ ಪ್ರಯೋಗ (ಪ್ರಧಾನಿಯವರಿಗೆ ಸಾಂಸ್ಕೃತಿಕ ಆಘಾತವನ್ನು ಉಂಟುಮಾಡಿದ ಪದಪ್ರಯೋಗಗಳು!) ಜಂತರ್ ಮಂತರ್ ಪ್ರತಿಭಟನೆಯಲ್ಲಿ ಸರ್ವೇ ಸಾಮಾನ್ಯವಾಗಿದ್ದವು. ಇವುಗಳ ಜೊತೆಗೆ ತಾವು ಅನುಸರಿಸಿದ (ಗಾಂಧೀಜಿಯವರು ಹಾಕಿಕೊಟ್ಟ) ಅಹಿಂಸಾ ಮಾರ್ಗವು ಎಂದಿಗೂ ಪ್ರಸ್ತುತವೆಂಬುದನ್ನು ಈ ಪೀಳಿಗೆಯವರು ತೋರಿಸಿಕೊಟ್ಟರು.

ಶಾಂತಿಯುತವಾಗಿ ಪ್ರತಿಭಟನೆಯಲ್ಲಿ ತೊಡಗಿದ್ದ ಯುವಕರ ಸೊಲ್ಲನ್ನು ಅಡಗಿಸಲು ದಿಲ್ಲಿಯ ಪೊಲೀಸರು ಬಲಪ್ರಯೋಗ ಮಾಡಿ ಪ್ರತಿಭಟನೆಯ ಕಾವು ತೀವ್ರವಾಗುವಂತೆ ಮಾಡಿದರು. ತಮ್ಮ ಮಂತ್ರಿಗಳು ರಾಜೀನಾಮೆ ಕೊಡುವ ಪರಿಪಾಠವಿಲ್ಲ ಎಂದು ಹೇಳುತ್ತಿದ್ದ ಭಾಜಪವು ತನ್ನ ಹಿರಿಯ ಮಂತ್ರಿಯೊಬ್ಬರ ತಲೆದಂಡ ನೀಡಬೇಕಾಗಿ ಬಂತು.


ಈ ಬೆಳವಣಿಗೆಯ ಬೆನ್ನಲ್ಲೇ ದೇಶದ ಹಲವೆಡೆ ವಿಭಿನ್ನ ರೂಪದಲ್ಲಿ ಆಳುವ ಪಕ್ಷದ ನೀತಿಗಳಿಂದ ಜನಸಾಮಾನ್ಯರ ಮೇಲೆ ಆಗುತ್ತಿರುವ ಸಂಕಟಗಳ ವಿರುದ್ಧ ಧ್ವನಿಗಳು ಎದ್ದಿವೆ. ಭಾಜಪ ಸರಕಾರವು ಹರಡಿಸುತ್ತಿದ್ದ ಭಯದ ವಾತಾವರಣ ಕರಗಿದೆ. ಬಿಜೆಪಿಯು 12 ವರ್ಷಗಳಿಂದ ಜಪಿಸುತ್ತಿದ್ದ ಹಿಂದೂ-ಮುಸ್ಲಿಮ್-ಆತಂಕವಾದ-ರಾಷ್ಟ್ರಭಕ್ತಿ-ಸನಾತನ ಸಂಸ್ಕೃತಿ ಮುಂತಾದ ವಿಷಯಗಳು ಹಳಸಿವೆ. ಯುವಜನರನ್ನು ತಮ್ಮ ಬಳಿ ಸೆಳೆಯಲು ಪ್ರಧಾನಿ ಮೋದಿ ಹೊಸ ಹೊಸ ದಾರಿಗಳನ್ನು ಹುಡುಕುತ್ತಿದ್ದಾರೆ. ಅದರ ಜೊತೆಗೆ ಸರಕಾರದ ನೀತಿಗಳನ್ನು ಪ್ರಶ್ನಿಸುವವರನ್ನು ದಿಮಾಗಿ ನಕ್ಸಲ್ (ವೈಚಾರಿಕ ನಕ್ಸಲರು) ಎಂದೂ ಅವಹೇಳನ ಮಾಡಿದ್ದಾರೆ.

ಮೇಲ್ನೋಟಕ್ಕೆ ನೀಟ್ ಪರೀಕ್ಷೆಗಳ ಅವ್ಯವಹಾರಗಳು ಪ್ರತಿಭಟನೆಗೆ ಕಾರಣವಾದರೂ ಭಾಜಪ ಸರಕಾರದ ಸುದೀರ್ಘ ಅಧಿಕಾರಾವಧಿಯಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ತಲ್ಲಣಗಳು ಯುವಜನರನ್ನು ಹತಾಶರನ್ನಾಗಿ ಮಾಡಿದಂತೆ ತೋರುತ್ತಿದೆ. ನಿರಂತರ ಉದ್ಯೋಗ ನಷ್ಟ, ಹೊಸ ಉದ್ಯೋಗಗಳ ಕೊರತೆ, ಬೆಲೆ ಏರಿಕೆ, ಹೆಚ್ಚುತ್ತಿರುವ ಬಡತನ ಹಾಗೂ ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯಗಳು ಯುವಜನತೆಯ ಗಮನಕ್ಕೆ ಬಾರದಿರುತ್ತದೆಯೇ?

ಈ ದೃಷ್ಟಿಯಿಂದ ಜೆನ್ ಝಿಗಳು ದೇಶದ ರಾಜಕೀಯದಲ್ಲಿ ಹೊಸ ಸಂಚಲನೆಗೆ ಬುನಾದಿ ಹಾಡಿದ್ದಾರೆ. ಶಿಕ್ಷಣ ಮಂತ್ರಿಯ ರಾಜೀನಾಮೆ ಸಣ್ಣ ಹೆಜ್ಜೆ; ಶಿಕ್ಷಣ ವ್ಯವಸ್ಥೆಯಲ್ಲಿ ಆಗಬೇಕಾದ ಸುಧಾರಣೆಗಳು ಬಹಳಷ್ಟು ಇವೆ ಎಂದು ಸಿಜೆಪಿಯ ನಾಯಕರು ಹೇಳಿದ್ದಾರೆ. ಸರಕಾರವು ಕೊಟ್ಟ ಮಾತುಗಳನ್ನು ಉಳಿಸಿಲ್ಲ ಎಂದು ಸೆಪ್ಟೆಂಬರ್ 5ರಿಂದ ಮತ್ತೆ ಆಂದೋಲನಕ್ಕೆ ತೊಡಗುವ ಸೂಚನೆಯನ್ನು ಕೊಟ್ಟಿದ್ದಾರೆ.

ಯುವಜನರ ಪ್ರತಿಭಟನೆಯಲ್ಲಿ ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಿಗೂ ಪಾಠಗಳಿವೆ. ಅವುಗಳು ತಳಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಅಧ್ಯಯನ ಮಾಡಿ ಸ್ಪಂದಿಸಬೇಕು. ಅವರ ಆಶೋತ್ತರಗಳನ್ನು ಎಲ್ಲಾ ವೇದಿಕೆಗಳಲ್ಲಿಯೂ ಮುನ್ನೆಲೆಗೆ ತರಬೇಕು. ವೈಯಕ್ತಿಕ ಅಜೆಂಡಾಗಳನ್ನು ಬದಿಗಿರಿಸಿ ಜನಸಾಮಾನ್ಯರ ಸಂಕಟಗಳ ಬಗ್ಗೆ ನಿರಂತರ ಧ್ವನಿಯನ್ನು ಏರಿಸುವ ತುರ್ತು ದೇಶದ ಮುಂದಿದೆ.

ಮೋದಿಯವರ 12 ವರ್ಷಗಳ ಅಧಿಕಾರಾವಧಿಯಲ್ಲಿ ಎರಡನೆಯ ಬಾರಿ ಅವರ ಗರ್ವಭಂಗವಾಗಿದೆ. ಹಿಂದೆ 2020-21ರಲ್ಲಿ ಆದ ರೈತರ ಪ್ರತಿಭಟನೆ ಅವರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಮಾಡಿತ್ತು. ಈಗ ಯುವಜನತೆಯ ಶಾಂತಿಯುತ ಪ್ರತಿಭಟನೆಗಳು ದೇಶದ ಪ್ರಜಾಸತ್ತೆಯು ಇನ್ನೂ ಜೀವಂತವಿದೆ ಎಂಬುದನ್ನು ಎತ್ತಿ ತೋರಿಸಿದೆ. ಈ ಬೆಳವಣಿಗೆಯು ದೇಶದ ಭವಿಷ್ಯದ ದೃಷ್ಟಿಯಿಂದ ಸ್ವಾಗತಾರ್ಹ.



ನೇಪಾಳದ ಜಲಪ್ರಳಯ: ಬಿಹಾರದಲ್ಲಿ ಕಟ್ಟೆಚ್ಚರ; 2008ರ ಕೋಶಿ ದುರಂತದ ಪಾಠ ಬಲ್ಲಿರಾ?

ನದಿಪಾತ್ರ ಬದಲಾವಣೆಯಿಂದ ಉಂಟಾಗುವ ವಿಪತ್ತುಗಳ ಕುರಿತು ಚರ್ಚಿಸುವಾಗ 2008ರ ಕೋಶಿ ದುರಂತವನ್ನು ಮರೆಯುವಂತಿಲ್ಲ. 2008ರ ಆಗಸ್ಟ್ 18ರಂದು ನೇಪಾಳದ ಕುಶಾಹ ಬಳಿ ಪೂರ್ವ ಕೋಶಿಯ ತಟಬಂಧ ( ) ಒಡೆದು ನದಿಯು ಸುಮಾರು ಸಾವಿರಾರು ವರ್ಷಗಳ ಹಿಂದೆ ಬಿಟ್ಟುಹೋಗಿದ್ದ ತನ್ನ ಹಳೆಯ ಹರಿವಿನ ಮಾರ್ಗಕ್ಕೆ ತಿರುಗಿತ್ತು. ಅಧ್ಯಯನಗಳ ಪ್ರಕಾರ, ಆ ಸಮಯದಲ್ಲಿ ನೀರಿನ ಹರಿವು ಬ್ಯಾರೇಜ್‌ನ ವಿನ್ಯಾಸ ಸಾಮರ್ಥ್ಯಕ್ಕಿಂತ ಕಡಿಮೆಯಿದ್ದರೂ, ತಟಬಂಧದ ಸವೆತ, ಹೂಳು ತುಂಬುವಿಕೆ ಮತ್ತು ನದಿಹಾಸಿನ ಎತ್ತರ ಏರಿಕೆಯಂತಹ ನಿರ್ವಹಣಾ ಸಮಸ್ಯೆಗಳು ದುರಂತಕ್ಕೆ ಪ್ರಮುಖ ಕಾರಣಗಳಾಗಿದ್ದವು.

ನದಿಯು ಹಳೆಯ ಪಾತ್ರದತ್ತ ಏಕಾಏಕಿ ತಿರುಗಿದಾಗ, ಹೊಸದಾಗಿ ನಿರ್ಮಾಣವಾಗಿದ್ದ ದಟ್ಟ ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿತ್ತು. ಬಿಹಾರ ಸರ್ಕಾರದ ಮತ್ತು ವಿಶ್ವ ಬ್ಯಾಂಕ್‌ನ ದಾಖಲೆಗಳ ಪ್ರಕಾರ, 2008ರ ಕೋಶಿ ದುರಂತದಲ್ಲಿ ಐದು ಅತ್ಯಂತ ಬಾಧಿತ ಜಿಲ್ಲೆಗಳಲ್ಲೇ ಸುಮಾರು 33 ರಿಂದ 34 ಲಕ್ಷ ಜನರು ತೀವ್ರ ಸಂಕಟಕ್ಕೆ ತುತ್ತಾಗಿದ್ದರು.

ನೇಪಾಳದಲ್ಲಿ ಇತ್ತೀಚೆಗೆ ಸಂಭವಿಸಿದ ಭೀಕರ ಜಲಪ್ರಳಯವು ಕೇವಲ ಆ ದೇಶಕ್ಕೆ ಮಾತ್ರವಲ್ಲದೆ, ನೆರೆಯ ಭಾರತಕ್ಕೂ ಭಾರಿ ಆತಂಕವನ್ನು ಸೃಷ್ಟಿಸಿದೆ. ನೇಪಾಳದ ಬೆಟ್ಟಗುಡ್ಡಗಳಲ್ಲಿ ಉಂಟಾಗುವ ಹವಾಮಾನ ವೈಪರೀತ್ಯಗಳು ಮತ್ತು ಪ್ರವಾಹದ ನೇರ ಪರಿಣಾಮ ಭಾರತದ ಗಡಿ ರಾಜ್ಯಗಳ ಮೇಲೆ, ವಿಶೇಷವಾಗಿ ಬಿಹಾರದ ಮೇಲೆ ತಕ್ಷಣವೇ ಬೀರುತ್ತದೆ. ಆದರೆ, ಪ್ರಸ್ತುತ ನೇಪಾಳದ ರಸುವಾ ಜಿಲ್ಲೆಯಲ್ಲಿ ಉಂಟಾಗಿರುವ ಪ್ರವಾಹವು ಬಿಹಾರದ ಕುಖ್ಯಾತ ಕೋಶಿ ನದಿ ವ್ಯವಸ್ಥೆಯ ಭಾಗವಾಗಿರದೆ, ಗಂಡಕ್ ನದಿ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿದೆ. ಆದ್ದರಿಂದ ಬಿಹಾರ ಸರ್ಕಾರದ ತಕ್ಷಣದ ಆತಂಕವು ಗಂಡಕ್ ನದಿಯ ಕುರಿತಾಗಿದ್ದು, ಎರಡೂ ನದಿ ವ್ಯವಸ್ಥೆಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ.

ಪ್ರಸ್ತುತ ಪ್ರವಾಹ ಸಂಭವಿಸಿರುವುದು ರಸುವಾ ಜಿಲ್ಲೆಯ ಭೋಟೆಕೋಶಿ ಮತ್ತು ತ್ರಿಶೂಲಿ ನದಿ ಕಣಿವೆಯಲ್ಲಿ. ಈ ಭೋಟೆಕೋಶಿಯು, ತ್ರಿಶೂಲಿ-ಗಂಡಕಿ ಜಲಾನಯನದ ಮೇಲ್ಭಾಗದ ನದಿಯಾಗಿದೆ. ತ್ರಿಶೂಲಿ ನದಿಯು ಮುಂದೆ ಸಾಗಿ ನಾರಾಯಣಿ ಮತ್ತು ಗಂಡಕ್ ನದಿಯನ್ನು ಸೇರುತ್ತದೆ.

ಕೋಶಿ ನದಿಯ ಕುರಿತಾದ ಐತಿಹಾಸಿಕ ಹಿನ್ನೆಲೆಯನ್ನು ನೋಡುವುದಾದರೆ, ಸಪ್ತ ಕೋಶಿ ನದಿಯು ನೇಪಾಳದಿಂದ ದಕ್ಷಿಣಕ್ಕೆ ಹರಿದು ಬೀರ್‌ಪುರ/ಭೀಮನಗರ ಪ್ರದೇಶದ ಕೋಶಿ ಬ್ಯಾರೇಜ್ ಸಮೀಪ ಭಾರತ-ನೇಪಾಳ ಗಡಿಯನ್ನು ದಾಟಿ ಬಿಹಾರಕ್ಕೆ ಪ್ರವೇಶಿಸುತ್ತದೆ. ಮುಂದೆ ಇದು ಕಟಿಹಾರ್ ಜಿಲ್ಲೆಯ ಕುರ್ಸೆಲಾ ಸಮೀಪ ಗಂಗಾ ನದಿಯನ್ನು ಸೇರುತ್ತದೆ. ಈ ಕೋಶಿ ವ್ಯವಸ್ಥೆಗೆ ಕಮಲಾ-ಬಲಾನ್ ಮತ್ತು ಬಾಗ್ಮತಿ ನದಿಗಳು



ಕೆಳಭಾಗದಲ್ಲಿ ಸೇರಿಕೊಳ್ಳುತ್ತವೆ. ಇದು ಕೋಶಿ ನದಿಯ ಸಾಮಾನ್ಯ ಭೌಗೋಳಿಕ ಸ್ವರೂಪವಾಗಿದ್ದು, ಪ್ರಸ್ತುತ ತ್ರಿಶೂಲಿ ಜಲಪ್ರಳಯಕ್ಕೂ ಈ ಭೌಗೋಳಿಕ ಮಾರ್ಗಕ್ಕೂ ಸಂಬಂಧವಿಲ್ಲ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಿದೆ.

ಸಾಮಾನ್ಯವಾಗಿ ಕೋಶಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾದಾಗ, ಹಿಮ ಕರಗಿದಾಗ ಅಥವಾ ಮೇಲ್ಭಾಗದಲ್ಲಿ ನೀರಿನ ಪ್ರಮಾಣ ಹೆಚ್ಚಾದಾಗ, ಬಿಹಾರದ ಸುಪೌಲ್, ಸಹರ್ಸಾ, ಮಧೇಪುರ ಮತ್ತು ಖಗಡಿಯಾ ಜಿಲ್ಲೆಗಳಲ್ಲಿ ಪ್ರವಾಹದ ಭೀತಿ ಎದುರಾಗುತ್ತದೆ. ಪ್ರತಿವರ್ಷ ಸೃಷ್ಟಿಸುವ ಅಪಾರ ಹಾನಿಯಿಂದಾಗಿ ಕೋಶಿಯನ್ನು ಬಿಹಾರದ ಶೋಕದ ನದಿ ಎಂದೇ ಕರೆಯಲಾಗುತ್ತದೆ. ಆದರೆ, ಈಗಿನ ರಸುವಾ ಪ್ರವಾಹದ ನೀರು ನೇರವಾಗಿ ಕೋಶಿಯತ್ತ ಬರುತ್ತಿಲ್ಲ. ಬಿಹಾರದ ಪಾಲಿಗೆ ಪ್ರಸ್ತುತ ಎದುರಾಗಿರುವ ಆತಂಕವು ತ್ರಿಶೂಲಿ-ನಾರಾಯಣಿ-ಗಂಡಕ್ ವ್ಯವಸ್ಥೆಯ ಮೂಲಕ ಹರಿದುಬರುವ ಪ್ರವಾಹದ್ದಾಗಿದೆ.

ನದಿಪಾತ್ರ ಬದಲಾವಣೆಯಿಂದ ಉಂಟಾಗುವ ವಿಪತ್ತುಗಳ ಕುರಿತು ಚರ್ಚಿಸುವಾಗ 2008ರ ಕೋಶಿ ದುರಂತವನ್ನು ಮರೆಯುವಂತಿಲ್ಲ. 2008ರ ಆಗಸ್ಟ್ 18ರಂದು ನೇಪಾಳದ ಕುಶಾಹ ಬಳಿ ಪೂರ್ವ ಕೋಶಿಯ ತಟಬಂಧ ( ) ಒಡೆದು ನದಿಯು ಸುಮಾರು 100-200 ವರ್ಷಗಳ ಹಿಂದೆ ಬಿಟ್ಟುಹೋಗಿದ್ದ ತನ್ನ ಹಳೆಯ ಹರಿವಿನ ಮಾರ್ಗಕ್ಕೆ () ತಿರುಗಿತ್ತು. ಅಧ್ಯಯನಗಳ ಪ್ರಕಾರ, ಆ ಸಮಯದಲ್ಲಿ ನೀರಿನ ಹರಿವು ಬ್ಯಾರೇಜ್‌ನ ವಿನ್ಯಾಸ ಸಾಮರ್ಥ್ಯಕ್ಕಿಂತ ಕಡಿಮೆಯಿದ್ದರೂ, ತಟಬಂಧದ ಸವೆತ, ಹೂಳು ತುಂಬುವಿಕೆ ಮತ್ತು ನದಿಹಾಸಿನ ಎತ್ತರ ಏರಿಕೆಯಂತಹ ನಿರ್ವಹಣಾ ಸಮಸ್ಯೆಗಳು ದುರಂತಕ್ಕೆ ಪ್ರಮುಖ ಕಾರಣಗಳಾಗಿದ್ದವು.

ನದಿಯು ಹಳೆಯ ಪಾತ್ರದತ್ತ ಏಕಾಏಕಿ ತಿರುಗಿದಾಗ, ಹೊಸದಾಗಿ ನಿರ್ಮಾಣವಾಗಿದ್ದ ದಟ್ಟ ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿತ್ತು. ಬಿಹಾರ ಸರ್ಕಾರದ ಮತ್ತು ವಿಶ್ವ ಬ್ಯಾಂಕ್‌ನ ದಾಖಲೆಗಳ ಪ್ರಕಾರ, 2008ರ ಕೋಶಿ ದುರಂತದಲ್ಲಿ ಐದು ಅತ್ಯಂತ ಬಾಧಿತ ಜಿಲ್ಲೆಗಳಲ್ಲೇ ಸುಮಾರು 33 ರಿಂದ 34 ಲಕ್ಷ ಜನರು ಪರಿಣಾಮಕ್ಕೆ ಒಳಗಾಗಿದ್ದರು. ಆಗಸ್ಟ್ 9ರಿಂದ 16ರ ನಡುವೆ ತಟಬಂಧದ ಅಪಾಯದ ಕುರಿತು ಅಧಿಕಾರಿಗಳಿಗೆ ಹಲವು ಎಚ್ಚರಿಕೆ ಸಂದೇಶಗಳು ರವಾನೆಯಾಗಿದ್ದರೂ, ಅವುಗಳು ಸಮರ್ಪಕವಾಗಿ ಸಾರ್ವಜನಿಕ ಎಚ್ಚರಿಕೆ ಮತ್ತು ಸ್ಥಳಾಂತರ ಕ್ರಮಗಳಾಗಿ ಬದಲಾಗದಿರುವುದು ಇಷ್ಟೊಂದು ಭಾರಿ ಪ್ರಮಾಣದ ದುರಂತಕ್ಕೆ ಕಾರಣವಾಯಿತು ಎಂಬ ವರದಿಗಳಿವೆ.

ಪ್ರಸ್ತುತ ಆಗಸ್ಟ್ 26ರಂದು ರಸುವಾ ಜಿಲ್ಲೆಯ ಲೆಂಡೆ ಖೋಲಾ/ಭೋಟೆ ಕೋಶಿ-ತ್ರಿಶೂಲಿ ಕಾರಿಡಾರ್‌ನಲ್ಲಿ ಸಂಭವಿಸಿದ ಪ್ರವಾಹವು, ಆರಂಭದಲ್ಲಿ ಗ್ಲೇಶಿಯಲ್ ಸರೋವರ ಸ್ಫೋಟ () ಅಥವಾ ಭೂಕಂಪದಿಂದ ಉಂಟಾಗಿದೆ ಎಂದು ಶಂಕಿಸಲಾಗಿತ್ತು. ಆದರೆ ಇತ್ತೀಚಿನ ಮತ್ತು ರಾಯಿಟರ್ಸ್ ವಿಶ್ಲೇಷಣೆಗಳು, ಇದು ಹಿಮ-ಬಂಡೆ ಕುಸಿತದಿಂದ (-/) ಉಂಟಾಗಿರುವ ಸಾಧ್ಯತೆಯನ್ನು ಸೂಚಿಸುತ್ತಿದ್ದು, ಅಂತಿಮ ತನಿಖೆ ಮುಂದುವರಿದಿದೆ. 2008ರ ಕೋಶಿ ನದಿಯ ದಿಕ್ಕು ಬದಲಾವಣೆಗೂ ಮತ್ತು ಇಂದಿನ ರಸುವಾದ ಹಠಾತ್ ಪ್ರವಾಹಕ್ಕೂ ಸ್ವರೂಪದಲ್ಲಿ ವ್ಯತ್ಯಾಸವಿದ್ದರೂ, ಮೇಲ್ಭಾಗದಲ್ಲಿ ಮತ್ತಷ್ಟು ತಡೆ ಉಂಟಾಗಿ ಎರಡನೇ ಹಂತದ ಪ್ರವಾಹ ಬರುವ ಸಾಧ್ಯತೆಯ ಬಗ್ಗೆ ತಜ್ಞರು ನಿಗಾ ವಹಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ತ್ರಿಶೂಲಿ-ನಾರಾಯಣಿ-ಗಂಡಕ್ ವ್ಯವಸ್ಥೆಯಿಂದ ಹರಿದುಬರಬಹುದಾದ ಹೆಚ್ಚುವರಿ ನೀರನ್ನು ಸಮರ್ಥವಾಗಿ ನಿರ್ವಹಿಸಲು ವಾಲ್ಮೀಕಿ ನಗರದಲ್ಲಿರುವ ಗಂಡಕ್ ಬ್ಯಾರೇಜ್‌ನ ಎಲ್ಲಾ 36 ಗೇಟ್‌ಗಳನ್ನು ಮುನ್ನೆಚ್ಚರಿಕಾ ಕ್ರಮವಾಗಿ ತೆರೆಯಲಾಗಿದೆ. ಗಂಡಕ್ ನದಿ ಪಾತ್ರದ ಸೂಕ್ಷ್ಮ ಪ್ರದೇಶಗಳಾದ ಪಶ್ಚಿಮಿ ಚಂಪಾರಣ್, ಪೂರ್ವಿ ಚಂಪಾರಣ್, ಗೋಪಾಲ್ ಗಂಜ್, ಸಾರಣ್, ಮುಜಫರ್ ಪುರ್, ವೈಶಾಲಿ, ಸೀತಾಮಢಿ ಹಾಗೂ ಶಿವಹರ್ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. 2008ರ ಕೋಶಿ ದುರಂತದಿಂದ ಪಾಠ ಕಲಿತಿರುವ ಆಡಳಿತ ವ್ಯವಸ್ಥೆಯು, ಈ ಬಾರಿ ವಿಪತ್ತು ನಿರ್ವಹಣಾ ಪಡೆಗಳನ್ನು (/) ಸನ್ನದ್ಧ ಸ್ಥಿತಿಯಲ್ಲಿರಿಸಿದೆ.

ಭಾರತದಲ್ಲೂ ಕಾವಿಗೆ ಕುಳಿತಿದೆ ಜಲಪ್ರಳಯ: 30 ವರ್ಷಗಳಲ್ಲಿ ಆರು ಪಟ್ಟು ಹೆಚ್ಚಿದ ಹಿಮ ಸರೋವರಗಳು!

ಪ್ರವಾಹದ ಈ ನೀರಿನ ಪ್ರಮಾಣ ಎಷ್ಟೊಂದು ಅಗಾಧವಾದದ್ದು ಎಂಬುದನ್ನು ನಮಗೆ ಸುಲಭವಾಗಿ ಅರ್ಥವಾಗುವಂತೆ ಬೆಂಗಳೂರು ಮಹಾನಗರದ ನೀರಿನ ಬಳಕೆಗೆ ಹೋಲಿಸಿ ನೋಡೋಣ. ಬೆಂಗಳೂರಿನ ಕೋಟಿಗೂ ಹೆಚ್ಚಿರುವ ಜನಸಂಖ್ಯೆಗೆ ಪ್ರತಿದಿನ ಕುಡಿಯಲು ಮತ್ತು ಬಳಕೆಗೆ ಅಂದಾಜು 2000 ಎಂ.ಎಲ್.ಡಿ (ಅಂದರೆ ದಿನಕ್ಕೆ 200 ಕೋಟಿ ಲೀಟರ್ ಅಥವಾ 20 ಲಕ್ಷ ಕ್ಯೂಬಿಕ್ ಮೀಟರ್) ನೀರಿನ ಅಗತ್ಯವಿದೆ. ಹಿಮಸೂ ಸರೋವರ ಒಡೆದರೆ ಕಣಿವೆಗೆ ನುಗ್ಗುವುದು ಪ್ರತಿ ಸೆಕೆಂಡಿಗೆ 14 ಲಕ್ಷ ಲೀಟರ್ ನೀರು. ಇದರರ್ಥ, ಆ ಪ್ರವಾಹದಲ್ಲಿ ಕೇವಲ 24 ನಿಮಿಷಗಳಲ್ಲಿ ಹರಿದುಬರುವ ನೀರು (ಸುಮಾರು 201 ಕೋಟಿ ಲೀಟರ್), ಇಡೀ ಬೆಂಗಳೂರು ಮಹಾನಗರದ ಒಂದು ದಿನದ ಸಂಪೂರ್ಣ ನೀರಿನ ಬಾಯಾರಿಕೆಯನ್ನು ತೀರಿಸಬಲ್ಲದು! ಕೇವಲ 24 ನಿಮಿಷಗಳಲ್ಲಿ ಇಡೀ ಮಹಾನಗರಕ್ಕೆ ಬೇಕಾಗುವಷ್ಟು ನೀರು ಒಮ್ಮೆಲೆ ಪ್ರವಾಹ ರೂಪದಲ್ಲಿ ಗುಡ್ಡದಿಂದ ಹರಿದುಬಂದರೆ ಕೆಳಗಿರುವ ಹಳ್ಳಿಗಳ ಗತಿ ಏನಾಗಬಹುದು ಎಂಬುದನ್ನು ಊಹಿಸಿದರೆ ಕಂಗಾಲಾಗುವುದು ಖಚಿತ

ನೇಪಾಳದಲ್ಲಿ ನಿನ್ನೆ ಸಂಭವಿಸಿದ ಭೀಕರ ಪ್ರವಾಹವು ಪ್ರಕೃತಿಯ ಮುನಿಸಿನ ಮತ್ತೊಂದು ಭಯಾನಕ ಮುಖವನ್ನು ಜಗತ್ತಿಗೆ ಅನಾವರಣಗೊಳಿಸಿದೆ. ಎತ್ತರದ ಬೆಟ್ಟಗಳಿಂದ ನುಗ್ಗಿ ಬಂದ ಅಪಾರ ಪ್ರಮಾಣದ ನೀರು ಕ್ಷಣಾರ್ಧದಲ್ಲಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ನೇಪಾಳದಲ್ಲಿ ಉಂಟಾದ ಇಂತಹದೇ ಜಲಪ್ರಳಯದ ಭೀತಿಯು ಇದೀಗ ಭಾರತದ ಪಾಲಿನ ಕಟು ಸತ್ಯವಾಗಿ ಪರಿಣಮಿಸುತ್ತಿದ್ದು, ಗಡಿಯಲ್ಲಿ ಆತಂಕದ ಕಾರ್ಮೋಡ ಕವಿದಿದೆ. ಭಾರತದ ನೈಸರ್ಗಿಕ ಸೌಂದರ್ಯ ಮತ್ತು ಭೌಗೋಳಿಕ ರಕ್ಷಣಾ ಕವಚವಾಗಿರುವ ಹಿಮಾಲಯ ಪರ್ವತ ಶ್ರೇಣಿಯು ಜಾಗತಿಕ ತಾಪಮಾನ ಏರಿಕೆಯ ದುಷ್ಪರಿಣಾಮಗಳಿಗೆ ತುತ್ತಾಗುತ್ತಿದ್ದು, ಉತ್ತರ ಭಾರತದ ಜನತೆಯನ್ನು ಬೆಚ್ಚಿಬೀಳಿಸುವ ಬೃಹತ್ ನೈಸರ್ಗಿಕ ವಿಕೋಪವೊಂದು ಸದ್ದಿಲ್ಲದೆ ರೂಪುಗೊಳ್ಳುತ್ತಿದೆ. ಭಾರತದಲ್ಲೂ ಇಂತಹುದೇ ಜಲಪ್ರಳಯ ಕಾವಿಗೆ ಕುಳಿತಿದೆಯೇ ಎಂಬ ಆತಂಕಕಾರಿ ಪ್ರಶ್ನೆಗೆ ವಿಜ್ಞಾನಿಗಳು ಹೌದು ಎಂಬ ಸ್ಪಷ್ಟ ಹಾಗೂ ಆಘಾತಕಾರಿ ಉತ್ತರವನ್ನು ನೀಡುತ್ತಿದ್ದಾರೆ.

ಹವಾಮಾನ ಬದಲಾವಣೆ ಹಾಗೂ ವಿಪರೀತ ತಾಪಮಾನದ ನೇರ ಪರಿಣಾಮವಾಗಿ ಹಿಮಾಲಯದ ಬೃಹತ್ ಹಿಮಗಡ್ಡೆಗಳು ವೇಗವಾಗಿ ಕರಗುತ್ತಿವೆ. ಹೀಗೆ ಕರಗಿದ ನೀರು ಪರ್ವತದ ಇಳಿಜಾರಿನಲ್ಲಿ ಹರಿದುಬಂದು ತಗ್ಗು ಪ್ರದೇಶಗಳಲ್ಲಿ ಅಪಾರ ಪ್ರಮಾಣದಲ್ಲಿ ಸಂಗ್ರಹವಾಗುತ್ತಿದೆ. ಕಳೆದ 30 ವರ್ಷಗಳಲ್ಲಿ, ಅಂದರೆ 1990ರ ಬಳಿಕ ಹಿಮಾಲಯದ ತಪ್ಪಲಿನಲ್ಲಿ ಸೃಷ್ಟಿಯಾಗಿರುವ ಇಂತಹ ಹಿಮ ಸರೋವರಗಳ ಸಂಖ್ಯೆಯು ಬರೋಬ್ಬರಿ ಆರು ಪಟ್ಟು ಹೆಚ್ಚಳವಾಗಿದೆ. 1990ರಲ್ಲಿ ಹಿಮಾಲಯದ ಉದ್ದಗಲಕ್ಕೂ ಕೇವಲ 107 ಇದ್ದ ಹಿಮ ಸರೋವರಗಳ ಸಂಖ್ಯೆ, 2024ರ ಹೊತ್ತಿಗೆ ಬರೋಬ್ಬರಿ 669ಕ್ಕೆ ಏರಿಕೆಯಾಗಿದೆ. ಇದು ಕೇವಲ ಒಂದು ಭೌಗೋಳಿಕ ಬದಲಾವಣೆಯಾಗಿರದೆ, ಮುಂದಿನ ದಿನಗಳಲ್ಲಿ ಲಕ್ಷಾಂತರ ಜನರ ಬದುಕು ಹಾಗೂ ಆಸ್ತಿಪಾಸ್ತಿಗಳನ್ನು ಬಲಿಪಡೆಯಬಲ್ಲ ಅತಿದೊಡ್ಡ ಜಲಕಂಟಕವಾಗಿ ಬದಲಾಗುತ್ತಿದೆ.

ಹಿಮಗಡ್ಡೆಗಳು ಕರಗಿ ಏಕಾಏಕಿ ಉಂಟಾಗುವ ಇಂತಹ ಭೀಕರ ಪ್ರವಾಹವನ್ನು ವೈಜ್ಞಾನಿಕ ಭಾಷೆಯಲ್ಲಿ ಗ್ಲೇಶಿಯರ್ ಲೇಕ್ ಔಟ್ ಬರ್ಸ್ಟ್ ಫ್ಲಡ್ () ಎಂದು ಕರೆಯಲಾಗುತ್ತದೆ. ಹಿಮಾಲಯದ ಎತ್ತರದ ಪ್ರದೇಶಗಳಲ್ಲಿ ತಾಪಮಾನ ಮಿತಿಮೀರಿದಾಗ ಹಿಮ ಕರಗಿ, ಕರಗಿದ ನೀರು ತಗ್ಗು ಪ್ರದೇಶಗಳಲ್ಲಿ ಬೃಹತ್ ಸರೋವರಗಳಾಗಿ ರೂಪುಗೊಳ್ಳುತ್ತವೆ. ವಿಶೇಷವೆಂದರೆ, ಈ ನೀರನ್ನು ತಡೆಹಿಡಿಯಲು ಯಾವುದೇ ಕಾಂಕ್ರೀಟ್ ಅಣೆಕಟ್ಟುಗಳಿರುವುದಿಲ್ಲ. ಬದಲಾಗಿ ಹಿಮ, ಮರಳು, ಮಣ್ಣು ಮತ್ತು ಕಲ್ಲುಬಂಡೆಗಳಿಂದ ನೈಸರ್ಗಿಕವಾಗಿ ರೂಪುಗೊಂಡ ಮೊರೈನ್ ಡ್ಯಾಮ್ () ಎಂಬ ಅತ್ಯಂತ ದುರ್ಬಲ ತಡೆಗೋಡೆಗಳು ಇರುತ್ತವೆ. 2025ರ ಜುಲೈನಲ್ಲಿ ಇದೇ ರೀತಿಯ ಹಿಮ ಸರೋವರವೊಂದು ಒಡೆದು ಉಂಟಾದ ಪ್ರವಾಹಕ್ಕೆ ಸಿಲುಕಿ 9 ಮಂದಿ ಸಾವನ್ನಪ್ಪಿದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.

ಈ ಹಿಮ ಸರೋವರಗಳ ಆತಂಕಕಾರಿ ಬೆಳವಣಿಗೆಯ ಕುರಿತು ಐಐಟಿ ರೋಪಡ್ ( ) ಮತ್ತು ಸಿಡ್ನಿ ಯೂನಿವರ್ಸಿಟಿ ಆಫ್ ಟೆಕ್ನಾಲಜಿ ( ) ಸಂಸ್ಥೆಗಳ ಸಂಶೋಧಕರು ಜಂಟಿಯಾಗಿ ಅತ್ಯಂತ ಪ್ರಮುಖ ಹಾಗೂ ವಿಸ್ತೃತ ಅಧ್ಯಯನ ನಡೆಸಿದ್ದಾರೆ. ಈ ಸಂಶೋಧಕರು ಅತ್ಯಾಧುನಿಕ ಉಪಗ್ರಹ ಚಿತ್ರಣಗಳು ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ () ದತ್ತಾಂಶಗಳನ್ನು ಬಳಸಿ ಹಿಮಾಲಯದ ಸರೋವರಗಳ ಆಳ, ನೀರಿನ ಪ್ರಮಾಣ, ತಡೆಗೋಡೆಯ ಶಕ್ತಿ ಮತ್ತು ಕೆಳಭಾಗದ ಜನವಸತಿ ಪ್ರದೇಶಗಳ ಸಮಗ್ರ ಮ್ಯಾಪಿಂಗ್ ಮಾಡಿದ್ದಾರೆ. ಇದೇ ತಿಂಗಳು ಬಿಡುಗಡೆಯಾದ ಈ ವೈಜ್ಞಾನಿಕ ವರದಿಯ ಆಧಾರದ ಮೇಲೆಯೇ ಭಾರತ ಸರ್ಕಾರ ಮತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರಗಳು ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಐಐಟಿ ರೋಪರ್ ಅಧ್ಯಯನದ ವರದಿಯ ಪ್ರಕಾರ, ಪ್ರಸ್ತುತ ಸೃಷ್ಟಿಯಾಗಿರುವ 669 ಹಿಮ ಸರೋವರಗಳ ಪೈಕಿ ಬರೋಬ್ಬರಿ 88 ಸರೋವರಗಳು ನಾನಾ ಪ್ರಮಾಣದಲ್ಲಿ ಒಡೆಯುವ ಸಾಧ್ಯತೆಯಿದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಈ 88 ಸರೋವರಗಳ ಪೈಕಿ 9 ಸರೋವರಗಳು ಹದ್ದು ಮೀರಿದ ಅಪಾಯದ ( ) ಅಂಚಿನಲ್ಲಿವೆ. ಅಂದರೆ, ಈ 9 ಸರೋವರಗಳ ಮಣ್ಣಿನ ತಡೆಗೋಡೆಗಳು ಅತ್ಯಂತ ದುರ್ಬಲಗೊಂಡು ಯಾವುದೇ ಕ್ಷಣದಲ್ಲಿ ಸ್ಫೋಟಗೊಳ್ಳುವ ಸಾಧ್ಯತೆ ಶೇಕಡಾ ನೂರರಷ್ಟಿದೆ. ಇದಲ್ಲದೆ 18 ಸರೋವರಗಳು ಹೆಚ್ಚು ಅಪಾಯಕಾರಿ ( ) ವರ್ಗದಲ್ಲಿದ್ದರೆ, ಇನ್ನುಳಿದ 26 ಸರೋವರಗಳು ಮಧ್ಯಮ ಅಪಾಯದ ( ) ಅಂದಾಜಿನಲ್ಲಿವೆ. ಈ ಅಂಕಿ-ಅಂಶಗಳು ಮುಂದಿನ ಭೀಕರ ಜಲಪ್ರಳಯದ ಸ್ಪಷ್ಟ ಮುನ್ಸೂಚನೆಯಾಗಿವೆ.

ಈ ಅಪಾಯಕಾರಿ ಹಿಮ ಸರೋವರಗಳ ಭೌಗೋಳಿಕ ವ್ಯಾಪ್ತಿಯು ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶದಂತಹ ಪರಿಸರ ಸೂಕ್ಷ್ಮ ರಾಜ್ಯಗಳನ್ನು ಸಂಪೂರ್ಣವಾಗಿ ಒಳಗೊಂಡಿದೆ. ನಿಸರ್ಗವೇ ಸೃಷ್ಟಿಸಿರುವ ಈ ಜಲಕಂಟಕದಿಂದಾಗಿ ಈ ಮೇಲ್ಕಂಡ ಯಾವುದೇ ರಾಜ್ಯವೂ ಸುರಕ್ಷಿತವಾಗಿಲ್ಲ. ಉತ್ತರಾಖಂಡ ಹಾಗೂ ಹಿಮಾಚಲ ಪ್ರದೇಶಗಳು ಈಗಾಗಲೇ ಹಲವಾರು ಬಾರಿ ಇಂತಹ ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಅಪಾರ ಸಾವು ನೋವು ಕಂಡಿವೆ. ಈ ಹೊಸ ಅಧ್ಯಯನವು ನದಿ ಪಾತ್ರದ ಜನಸಮುದಾಯವು ಪ್ರತಿದಿನವೂ ಭಯದ ನೆರಳಿನಲ್ಲೇ ಬದುಕುವಂತೆ ಮಾಡಿದೆ. ಒಂದು ಸಣ್ಣ ಸರೋವರ ಒಡೆದರೂ ಅದು ಕೆಳಗಿರುವ ನೂರಾರು ಹಳ್ಳಿಗಳನ್ನು ಸಂಪೂರ್ಣವಾಗಿ ಜಲಾವೃತಗೊಳಿಸಲಿದೆ.

ಹಿಮ ಸರೋವರಗಳ ಸ್ಫೋಟಕ್ಕೆ ಪ್ರಮುಖವಾಗಿ 4 ವೈಜ್ಞಾನಿಕ ಹಾಗೂ ಹವಾಮಾನ ವೈಪರೀತ್ಯದ ಕಾರಣಗಳಿದ್ದು, ಅದರಲ್ಲಿ ಮೊದಲನೆಯದು ಜಾಗತಿಕ ತಾಪಮಾನ ( ). ಪ್ರಸಿದ್ಧ ವಿಜ್ಞಾನ ಪತ್ರಿಕೆ ನೇಚರ್ () ವರದಿ ಮಾಡಿರುವಂತೆ, ಜಾಗತಿಕ ತಾಪಮಾನ ಇದೇ ವೇಗದಲ್ಲಿ ಮುಂದುವರಿದರೆ ಮುಂದಿನ 70 ವರ್ಷಗಳಲ್ಲಿ ಹಿಮಾಲಯದ ಕಾರಾಕೋರಂ ಶ್ರೇಣಿಯಲ್ಲಿರುವ ಶೇಕಡಾ 65ರಷ್ಟು ಹಿಮಬಂಡೆಗಳು ಸಂಪೂರ್ಣವಾಗಿ ಕರಗಲಿವೆ. ಕಾರಾಕೋರಂ ಶ್ರೇಣಿಯು ಭಾರತದ ನದಿಗಳಿಗೆ ಜೀವನಾಡಿಯಾಗಿದೆ. ಇಷ್ಟು ಬೃಹತ್ ಪ್ರಮಾಣದಲ್ಲಿ ಹಿಮ ಕರಗಿದರೆ, ನೈಸರ್ಗಿಕ ಸರೋವರಗಳ ನೀರಿನ ಮಟ್ಟ ಊಹೆಗೂ ನಿಲುಕದಷ್ಟು ಹೆಚ್ಚಾಗಿ, ಮಹಾಪ್ರಳಯ ಸೃಷ್ಟಿಯಾಗಲಿದೆ.

ಉಂಟಾಗಲು ಎರಡನೆಯ ಪ್ರಮುಖ ಕಾರಣ, ಹಿಮಾಲಯದ ಎತ್ತರದ ಪ್ರದೇಶಗಳಲ್ಲಿ ವಿಪರೀತವಾಗಿ ಹೆಚ್ಚುತ್ತಿರುವ ತಾಪಮಾನದ ಏರಿಕೆ. ಐಐಟಿ ಖರಗ್‌ಪುರ್ ( ) ವಿಜ್ಞಾನಿಗಳು ನೀಡಿರುವ ವರದಿಯಂತೆ, ಕಳೆದ 20 ವರ್ಷಗಳ ಅವಧಿಯಲ್ಲಿ ಹಿಮಾಲಯದ ಎತ್ತರದ ಪ್ರದೇಶಗಳ ಸರಾಸರಿ ತಾಪಮಾನವು 1 ಡಿಗ್ರಿ ಸೆಲ್ಸಿಯಸ್‌ನಷ್ಟು (1) ಏರಿಕೆಯಾಗಿದೆ. ಮೈದಾನ ಪ್ರದೇಶದಲ್ಲಿ ಇದು ಸಣ್ಣ ಬದಲಾವಣೆಯಂತೆ ಕಂಡರೂ, ಸದಾ ಮೈನಸ್ ಡಿಗ್ರಿಯಲ್ಲಿರಬೇಕಾದ ಪರ್ವತಗಳಲ್ಲಿ ಈ 1 ಡಿಗ್ರಿ ಏರಿಕೆಯು ಬೆಂಕಿಯಂತೆ ಕೆಲಸ ಮಾಡುತ್ತದೆ. ಇದು ಸಾವಿರಾರು ವರ್ಷಗಳಿಂದ ಗಟ್ಟಿಯಾಗಿದ್ದ ಹಿಮಬಂಡೆಗಳ ಒಳರಚನೆಯನ್ನು ದುರ್ಬಲಗೊಳಿಸಿ ವೇಗವಾಗಿ ಕರಗುವಂತೆ ಮಾಡುತ್ತಿದೆ.

ಮೂರನೆಯ ಕಾರಣವೆಂದರೆ, ಹವಾಮಾನ ಬದಲಾವಣೆಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಉಂಟಾಗುತ್ತಿರುವ ಅನಿರೀಕ್ಷಿತ ಮತ್ತು ಭಾರೀ ಪ್ರಮಾಣದ ಮಳೆ ( ) ಮತ್ತು ಮೇಘಸ್ಫೋಟಗಳು (). ಅಗಾಧ ಪ್ರಮಾಣದ ಮಳೆಯ ನೀರು ನೇರವಾಗಿ ಈ ಹಿಮ ಸರೋವರಗಳನ್ನು ಸೇರುತ್ತಿದೆ. ಕರಗುತ್ತಿರುವ ಹಿಮದ ನೀರು ಮತ್ತು ವಿಪರೀತ ಮಳೆಯ ನೀರು ಒಟ್ಟಿಗೆ ಸೇರಿದಾಗ ಸರೋವರಗಳು ಮಿತಿಮೀರಿ ತುಂಬಿಕೊಳ್ಳುತ್ತವೆ. ಇನ್ನು ನಾಲ್ಕನೆಯದಾಗಿ, ಭೂಕಂಪನ ವಲಯದಲ್ಲಿರುವ ( ) ಹಿಮಾಲಯದಲ್ಲಿ ಸಣ್ಣ ಭೂಕಂಪ ಸಂಭವಿಸಿದರೂ, ಅಥವಾ ಹಿಮಕುಸಿತ, ಭೂಕುಸಿತದಿಂದ ಕಲ್ಲುಬಂಡೆಗಳು ಜಾರಿಬಂದು ಸರೋವರದ ನೀರಿಗೆ ಅಪ್ಪಳಿಸಿದಾಗ ಬೃಹತ್ ಸುನಾಮಿ ಅಲೆಗಳು ಸೃಷ್ಟಿಯಾಗಿ ಮಣ್ಣಿನ ತಡೆಗೋಡೆಯನ್ನು ಪುಡಿಪುಡಿ ಮಾಡುತ್ತವೆ.

ಐಐಟಿ ರೋಪರ್ ಅಧ್ಯಯನದ ಪ್ರಕಾರ, ಈ ಗ್ಲೇಶಿಯರ್ ಪ್ರವಾಹದ ಅತ್ಯಂತ ನೇರ ಮತ್ತು ಭಯಾನಕ ಅಪಾಯ ಪಂಜಾಬ್‌ನ ಪಂಚ ನದಿಗಳ ಪಾತ್ರಗಳಿಗೆ ಎದುರಾಗಿದೆ. ವಿಶೇಷವಾಗಿ ರಾವಿ, ಬಿಯಾಸ್ ಮತ್ತು ಸಟ್ಲೆಜ್ ನದಿ ಪಾತ್ರಗಳು ಈ ಪ್ರಳಯದ ಹಾದಿಯಲ್ಲಿವೆ. ಹಿಮಾಚಲ ಪ್ರದೇಶದ ಎತ್ತರದ ಗುಡ್ಡಗಳಲ್ಲಿ ಸೃಷ್ಟಿಯಾಗಿರುವ ಹಿಮ ಸರೋವರಗಳು ಒಡೆದರೆ, ಆ ಅಪಾರ ಪ್ರಮಾಣದ ನೀರು ಮತ್ತು ಕಲ್ಲುಮಣ್ಣುಗಳು ನೇರವಾಗಿ ಈ ನದಿಗಳ ಮೂಲಕವೇ ಅತ್ಯಂತ ವೇಗವಾಗಿ ಹರಿದುಬರಬೇಕು. ಈ ನದಿ ಪಾತ್ರಗಳು ಕೃಷಿ, ಕೈಗಾರಿಕೆ ಮತ್ತು ಜನವಸತಿಯಿಂದ ದಟ್ಟವಾಗಿದ್ದು, ಪ್ರವಾಹವು ಬೃಹತ್ ಆರ್ಥಿಕ ಮತ್ತು ಜೀವಹಾನಿಯನ್ನು ಸೃಷ್ಟಿಸುವುದು ನಿಶ್ಚಿತ.

ಅಪಾಯದ ತೀವ್ರತೆಯನ್ನು ಅರಿಯಲು ಬಿಯಾಸ್ ನದಿ ಪಾತ್ರದಲ್ಲಿರುವ ಹಿಮಸೂ () ಎಂಬ ಹಿಮ ಸರೋವರವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ವಿಜ್ಞಾನಿಗಳ ಲೆಕ್ಕಾಚಾರದ ಪ್ರಕಾರ, ಈ ಸರೋವರದ ನೈಸರ್ಗಿಕ ತಡೆಗೋಡೆ ಒಡೆದರೆ, ಪ್ರತಿ ಸೆಕೆಂಡಿಗೆ ಬರೋಬ್ಬರಿ 1,385 ಕ್ಯೂಬಿಕ್ ಮೀಟರ್ ನೀರು ಕೆಳಮುಖವಾಗಿ ಧಾವಿಸುತ್ತದೆ. ಸಾಮಾನ್ಯ ಭಾಷೆಯಲ್ಲಿ ಹೇಳಬೇಕೆಂದರೆ ಇದು ಒಂದು ಸೆಕೆಂಡಿಗೆ ಸುಮಾರು 14 ಲಕ್ಷ ಲೀಟರ್ ನೀರಿನ ಹರಿವಿಗೆ ಸಮ. ಕೇವಲ ಒಂದು ಸೆಕೆಂಡಿನಲ್ಲಿ ಒಲಿಂಪಿಕ್ ಕ್ರೀಡಾಕೂಟದ ಗಾತ್ರದ 6 ಬೃಹತ್ ಈಜುಕೊಳಗಳನ್ನು ಸಂಪೂರ್ಣವಾಗಿ ತುಂಬುವಷ್ಟು ಅಗಾಧವಾದ ನೀರು ಇದಾಗಿದೆ! ಇಷ್ಟು ದೊಡ್ಡ ಪ್ರಮಾಣದ ನೀರು ರಭಸವಾಗಿ ಬಂದರೆ ಯಾವುದೇ ಸೇತುವೆ, ಕಟ್ಟಡ ಉಳಿಯುವುದಿಲ್ಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR